# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **501**

ಉತ್ತರಿಸಬೇಕಾದ ದಿನಾಂಕ: : **20-08-2026**

ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರು ಭಾರತದ ಪ್ರಜೆಗಳಾಗದೇ ಇರುವುದರಿಂದ ಸರ್ಕಾರವು ನೀಡುವ ಉಚಿತ ಸೌಲಭ್ಯಗಳಾದ, ಆರೋಗ್ಯ, ಶಿಕ್ಷಣ, ಆಹಾರದಂತಹ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿರುವುದರಿಂದ ರಾಜ್ಯದ ಬಡ ಜನರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರು ಭಾರತದ ಪ್ರಜೆಗಳಾಗದೇ ಇರುವುದರಿಂದ ಸರ್ಕಾರಿ ಸೌಲಭ್ಯಗಳನ್ನು ಪಡೆಯುತ್ತಿರುವ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಆ | ಕಳೆದ ಎರಡು ವರ್ಷಗಳಲ್ಲಿ ಎಷ್ಟು ಅಕ್ರಮ ನಿವಾಸಿಗಳನ್ನು ಗುರುತಿಸಿದೆ; (ಜಿಲ್ಲಾವಾರು ವಿವರ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಒಟ್ಟು **749** ಅಕ್ರಮ ನಿವಾಸಿಗಳನ್ನು ಗುರುತಿಸಿದೆ. |

| ಕ್ರಸಂ | ನಗರ/ಜಿಲ್ಲೆಗಳು | ಅಕ್ರಮ ನಿವಾಸಿಗರ ಸಂಖ್ಯೆ |
|---|---|---|
| 01 | ಬೆಂಗಳೂರು ನಗರ | 612 |
| 02 | ಬೆಂಗಳೂರು ಜಿಲ್ಲೆ | 57 |
| 03 | ಚಿಕ್ಕಮಗಳೂರು ಜಿಲ್ಲೆ | 05 |
| 04 | ಚಿತ್ರದುರ್ಗ ಜಿಲ್ಲೆ | 06 |
| 05 | ಧಾರವಾಡ ಜಿಲ್ಲೆ | 02 |
| 06 | ಹಾಸನ ಜಿಲ್ಲೆ | 07 |
| 07 | ಕೋಲಾರ ಜಿಲ್ಲೆ | 12 |
| 08 | ಮಂಡ್ಯ ಜಿಲ್ಲೆ | 01 |
| 09 | ಮಂಗಳೂರು ನಗರ | 23 |
| 10 | ರಾಮನಗರ ಜಿಲ್ಲೆ | 01 |
| 11 | ರಾಯಚೂರು ಜಿಲ್ಲೆ | 01 |
| 12 | ಶಿವಮೊಗ್ಗ ಜಿಲ್ಲೆ | 12 |
| 13 | ಉಡುಪಿ ಜಿಲ್ಲೆ | 10 |
| | **ಒಟ್ಟು** | **749** |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಇ | ರಾಜ್ಯದಲ್ಲಿ ವಾಸಿಸುತ್ತಿರುವ ಪಾಕಿಸ್ತಾನಿ ಪ್ರಜೆಗಳ ಸಂಖ್ಯೆ ಎಷ್ಟು; ಅದರಲ್ಲಿ ಆಪರೇಷನ್ ಸಿಂಧೂರ್ ಸಮಯದಲ್ಲಿ ಗಡಿಪಾರು ಮಾಡಲಾದ ಪಾಕಿಸ್ತಾನಿ ಪ್ರಜೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ವಾಸಿಸುತ್ತಿರುವ ಪಾಕಿಸ್ತಾನಿ ಪ್ರಜೆಗಳ ಅಂಕಿ-ಅಂಶ, ಅದರಲ್ಲಿ ಆಪರೇಷನ್ ಸಿಂಧೂರ್ ಸಂದರ್ಭದಲ್ಲಿ ಗಡಿಪಾರು ಮಾಡಲಾದ ಪಾಕಿಸ್ತಾನಿ ಪ್ರಜೆಗಳ ಮಾಹಿತಿ ಕೆಳಗಿನಂತಿದೆ. |

| ಕ್ರಸಂ | ನಗರ/ ಜಿಲ್ಲೆಗಳು | ಪಾಕಿಸ್ತಾನಿ ಪ್ರಜೆಗಳು ವಾಸಿಸುತ್ತಿರುವವರ ಸಂಖ್ಯೆ | ಆಪರೇಷನ್ ಸಿಂಧೂರ್ ಸಂದರ್ಭದಲ್ಲಿ ಗಡಿಪಾರು ಮಾಡಲಾದ ಪಾಕಿಸ್ತಾನಿ ಪ್ರಜೆಗಳ ಸಂಖ್ಯೆ |
|---|---|---|---|
| 01 | ಬೆಂಗಳೂರು ನಗರ | 27 | 03 |

| | | | |
|---|---|---|---|
| 02 | ಬೆಂಗಳೂರು ಜಿಲ್ಲೆ | 01 | - |
| 03 | ಬೆಳಗಾವಿ ನಗರ | 02 | 03 |
| 04 | ಚಿಕ್ಕಮಗಳೂರು ಜಿಲ್ಲೆ | 01 | - |
| 05 | ಹುಬ್ಬಳ್ಳಿ-ಧಾರವಾಡ ನಗರ | 01 | - |
| 06 | ಕಲಬುರಗಿ ನಗರ | 07 | - |
| 07 | ಕೋಲಾರ ಜಿಲ್ಲೆ | 01 | - |
| 08 | ಕೊಪ್ಪಳ ಜಿಲ್ಲೆ | 02 | - |
| 09 | ಮಂಗಳೂರು ನಗರ | 02 | - |
| 10 | ಮೈಸೂರು ನಗರ | 08 | - |
| 11 | ರಾಯಚೂರು ಜಿಲ್ಲೆ | 01 | - |
| 12 | ಬೆಂಗಳೂರು ದಕ್ಷಿಣ ಜಿಲ್ಲೆ ರಾಮನಗರ | 01 | - |
| 13 | ತುಮಕೂರು ಜಿಲ್ಲೆ | 04 | - |
| 14 | ಉತ್ತರ ಕನ್ನಡ ಜಿಲ್ಲೆ | 15 | - |
| | **ಒಟ್ಟು** | **73** | **06** |

| | | |
|---|---|---|
| ಈ) | ರಾಜ್ಯದಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ, ಧರ್ಮ ಪ್ರಚಾರ, ಡ್ರಗ್ಸ್ ವ್ಯವಹಾರ ಮುಂತಾದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಅಕ್ರಮ ನಿವಾಸಿಗಳ ಸಂಖ್ಯೆ ಎಷ್ಟು; ಯಾವ ಯಾವ ಗಂಭೀರ ಪ್ರಕರಣಗಳು ಅಕ್ರಮ ನಿವಾಸಿಗಳ ಮೇಲೆ ದಾಖಲಾಗಿವೆ? (ವಿವರ ನೀಡುವುದು) | ರಾಜ್ಯದಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ, ಧರ್ಮ ಪ್ರಚಾರ, ಡ್ರಗ್ಸ್ ವ್ಯವಹಾರ ಮುಂತಾದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಒಟ್ಟು **47** ಅಕ್ರಮ ನಿವಾಸಿಗಳ ಮೇಲೆ **23** ಪ್ರಕರಣಗಳು ದಾಖಲಾಗಿದ್ದು, ಪ್ರಕರಣಗಳ ವಿವರವನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. |

**ಹೆಚ್ ಡಿ 279 ಪಿಎಂಎಸ್ 2026**

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು

# ಅನುಬಂಧ – 01

**Bengaluru City**

| ಕ್ರ. ಸಂ | ನಗರ/ ಜಿಲ್ಲೆ | ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಅಕ್ರಮ ನಿವಾಸಿಗಳು | ಮೊ.ಸಂ ಮತ್ತು ಕಲಂ | ಪ್ರಕರಣದ ವಿಧ (ಫಾರಿನರ್ಸ್/ ಪಾಸ್‌ಪೋರ್ಟ್, ಡ್ರಗ್ಸ್, ಕೊಲೆ, ಸುಲಿಗೆ, ಅತ್ಯಾಚಾರ, ಧರ್ಮ ಪ್ರಚಾರ, ಇತರೆ) | ಪ್ರಕರಣದ ಸಂಪೂರ್ಣ ವಿವರ |
|---|---|---|---|---|---|
| 01 | ಬೆಂಗಳೂರು ನಗರ | ಬಾಂಗ್ಲಾದೇಶ | ತಲಘಟ್ಟಪುರ ಪೊಲೀಸ್ ಠಾಣೆ 66/2026 ಕಲಂ 303(2) ಬಿಎನ್‌ಎಸ್ ಮತ್ತು 14 ವಿದೇಶಿ ಆಕ್ಟ್ | ಕಳ್ಳತನ | ಪಿರ್ಯಾದುದಾರರಾದ ಶ್ರೀ ಮಹೇಶ್‌ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ, ನನ್ನ ತಮ್ಮನಾದ ಶ್ರೀ ಕಿರಣ್ ಕುಮಾರ್‌ರವರು ಹೊಸಹಳ್ಳಿ, 2ನೇ ಕ್ರಾಸ್, ಗ್ರೇಸ್ ಇನ್‌ಸ್ಟಿಟ್ಯೂಟ್ ಹತ್ತಿರ ಇರುವ ನಂ.2177 ಮನೆಯಲ್ಲಿ ಸುಮಾರು 8 ವರ್ಷಗಳಿಂದ ಸಂಸಾರ ಸಮೇತ ವಾಸ ಮಾಡಿಕೊಂಡಿದ್ದು, ಆತನು ಸಹ ನನ್ನ ಜೊತೆಯಲ್ಲಿ ಇಂಟೀರಿಯರ್ ಕೆಲಸ ಮಾಡಿಕೊಂಡಿರುತ್ತಾನೆ. ದಿನಾಂಕ:18.02.2026 ರಂದು ಮಧ್ಯಾಹ್ನ ಸುಮಾರು 01.00 ಗಂಟೆಗೆ ನನ್ನ ತಮ್ಮ ಕಿರಣ್ ಕುಮಾರ್ ಮನೆಗೆ ಬೀಗ ಹಾಕಿಕೊಂಡು ಸಂಸಾರ ಸಮೇತ ನಮ್ಮ ಸ್ವಂತ ಗ್ರಾಮವಾದ ಸಕಲೇಶಪುರ ಹತ್ತಿರ ಇರುವ ಇಡುವನಹಳ್ಳಿಗೆ ಹೋಗಿರುತ್ತಾರೆ. ನಾನು ಈ ದಿನ ದಿನಾಂಕ:19.02.2026 ರಂದು ಸಂಜೆ ಸುಮಾರು 07.00 ಗಂಟೆಗೆ ಇಂಟೀರಿಯರ್ ಕೆಲಸಕ್ಕೆ ಸಂಬಂಧಿಸಿದ ಟೂಲ್ಸ್ ಗಳನ್ನು ಇಡಲು ನನ್ನ ತಮ್ಮನ ಮನೆಯ ಬಳಿ ಹೋದಾಗ ಯಾರೋ ಕಳ್ಳರು ಮನೆಯ ಬಾಗಿಲನ್ನು ಮುರಿದು ಒಳಗೆ ಪ್ರವೇಶ ಮಾಡಿ, ಬೆಡ್‌ರೂಂ ವಾರ್ಡ್‌ರೋಬ್‌ಗಳು ತೆರೆದಿರುವುದು ಕಂಡು ಬಂದಿದ್ದು, ನಂತರ ನಾನು ನನ್ನ ತಮ್ಮನಿಗೆ ಕರೆ ಮಾಡಿ ವಿಚಾರ ಮಾಡಲಾಗಿ ನನ್ನ ತಮ್ಮ ವಾರ್ಡ್‌ರೋಬ್‌ಗಳಲ್ಲಿ 01 ಗ್ರಾಂ ತೂಕದ 6 ಚಿನ್ನದ ಕಾಯಿನ್ನಳು, 5 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, 450 ಗ್ರಾಂ ತೂಕದ ಬೆಳ್ಳಿಯ ದೇವರ ಮುಖವಾಡ, 20.000/- ರೂ ನಗದು ಹಣ ಮತ್ತು ಒಂದು ಡಬ್ಬಾದಲ್ಲಿ 5000/- ರೂಗಳ ಚಿಲ್ಲರೆ ಕಾಯಿನ್ ಗಳನ್ನು ಇಟ್ಟಿರುವುದಾಗಿ ತಿಳಿಸಿದ್ದು, ಈ ಮೇಲ್ಕಂಡವುಗಳನ್ನು ನಾನು ಹುಡುಕಿ ನೋಡಿದಾಗ ವಾರ್ಡ್‌ರೋಬ್‌ನಲ್ಲಿ ಇರಲಿಲ್ಲ. ಆದ್ದರಿಂದ ಯಾರೋ ಕಳ್ಳರು ನನ್ನ ತಮ್ಮನ ಮನೆಯ ಬಾಗಿಲನ್ನು ಮುರಿದು ವಾರ್ಡ್‌ರೋಬ್‌ನಲ್ಲಿದ್ದ ಚಿನ್ನದ ಕಾಯನ್ ಗಳನ್ನು, ಓಲೆಯನ್ನು, ಬೆಳ್ಳಿಯ ಮುಖವಾಡ ಮತ್ತು ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ಸದರಿ ಆಸಾಮಿಗಳನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ. |
| 02 | ಬೆಂಗಳೂರು | ಮಹಮ್ಮದ್ ನಯನ್, | ರಾಜಗೋಪಾಲ ನಗರ | ಮೋಸ | ಮೋಸ ಮಾಡುವ ಉದ್ದೇಶದಿಂದ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಪರಾಧವೆಸಗಿರುತ್ತಾನೆ. |

| | | | | | |
|---|---|---|---|---|---|
| | ನಗರ | ಬಾಂಗ್ಲಾದೇಶಿ | ಠಾಣಾ ಮೊ ಸಂ 13/2025,IPC 1860 U/s: 471,468,465, 420 The Aadhaar (Targeted Delivery of Financial and Other Subsidies, Benefits and Services) Act, 2016 U/s: 39 | | |
| 03 | ಬೆಂಗಳೂರು ನಗರ | ಬಾಂಗ್ಲಾದೇಶ | ಆರ್.ಎಂ ನಗರ ಪೊಲೀಸ್ ಠಾಣೆ ಮೊ.ಸಂ 662/2024 U/s 12 Passport Act. & 14(c) Foreigners Act & 143 BNS-2023 | Human Trafficking | ಪಿರ್ಯಾದುದಾರರಾದ ಶ್ರೀ ಅಮರೇಶ ಪಿಎಸ್ಐ ರಾಮಮೂರ್ತಿನಗರ ಪೊಲೀಸ ಠಾಣೆರವರು ನೀಡಿದ ದೂರಿನ ಸಾರಾಂಶವೇನೆಂದರೆ ಪಿರ್ಯಾದುದಾರರು ಈ ದಿನ ಮಧ್ಯಾಹ್ನ 3-15 ಗಂಟೆಗೆ ಠಾಣೆಯಲ್ಲಿದ್ದಾಗ ಬಂದ ಮಾಹಿತಿಯಂತೆ ಕೆ ಆರ ಪುರ ರೈಲ್ವೆ ಸ್ಟೇಷನ ಮುಂಬಾಗದ ಟಿನ್ ಪ್ಯಾಕ್ಟರಿ ವೈಟಪೀಲ್ಡ್ ರಸ್ತೆಯ ಬಳಿ 5-6 ಜನರು ಬಾಂಗ್ಲಾದೇಶದ ಪ್ರಜೆಗಳು ಅನುಮಾನಸ್ಪದವಾಗಿ ತಿರುಗಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ತಡಮಾಡಿದರೆ ಅಲ್ಲಿಂದ ಪರಾರಿಯಾಗುವ ಬಗ್ಗೆ ತಿಳಿದು ಕೊಡಲೇ ಸಿಬ್ಬಂದಿಗಳಾದ ಬಸಪ್ಪಾ ಕೂಡಗಿ ಹೆಚ್ ಸಿ 8167, ಅನಿಲಕುಮಾರ ಪಿ ಸಿ 14891, ಜಗದೀಶ ಪಿಸಿ 20448 ಮತ್ತು ಪುಷ್ಪ ಮಪಿಸಿ 21579 ರವರೊಂದಿಗೆ ತರಳಿ ಸದರಿ ಸ್ಥಳದಲ್ಲಿ 4 ಜನ ಗಂಡಸರು 1 ಹೆಂಗಸರು 1 ಹೆಣ್ಣು ಮಗು ಲಗೇಜ್ ಸಮೇತವಾಗಿ ಯಾರಿಗೋ ಕಾಯುತ್ತಿದ್ದು ಅವರ ಬಳಿ ತರಳಿ ವಿಚಾರಿಸಲಾಗಿ 1)ಇಲಿಯಾಸ ಶೇಖ್ ಬಿನ್ ಮಹಮ್ಮದ್ ಯೂಸುಫ್ ಶೇಖ್ 29 ವರ್ಷ 2)ಹಫಿಜ ಬಿನ್ಮಿಮಾಯತ 40 ವರ್ಷ 3)ಷಜ್ಜಾದ ಬಿನ್ ಹಫೀಜ 21 ವರ್ಷ 4)ರೆಹಾನ ಬಿನ್ ಇದ್ರೀಸ 19 ವರ್ಷ 5)ಬಾಬಿ ಕೋ ಇದ್ರೀಸ 6)ಸದಿಯಾ ಬಿನ್ ಇದ್ರೀಸ್ 8 ವರ್ಷ ರವರನ್ನು ವಿಚಾರಿಸಲಾಗಿ ಬಾಂಗ್ಲಾದೇಶದ ಪ್ರಜೆಗಳು ಎಂದು ತಿಳಿಸಿದ್ದು ಅವರ ಬಳಿ ಸೂಕ್ತ ದಾಖಲಿಗಳು ಇರುವುದಿಲ್ಲ. ಪಿರ್ಯಾದುದಾರರು ಹೆಚ್ಚಿನ ವಿಚಾರಣೆ ಮಾಡಲಾಗಿ ಇಲಿಯಾಜ್ ಶೇಖ ರವರು ಉದ್ಯೋಗದ ಆಮಿಷ ಒಡ್ಡಿ ಮಾನವ ಕಳ್ಳ ಸಾಗಾಣಿಕೆಯ ಮುಖಾಂತರ ಅಕ್ರಮವಾಗಿ ಬಾಂಗ್ಲಾದೇಶದಿಂದ ಬಾರತದ ಗಡಿ ದಾಟಿಸಿ ಅವರಿಗೆ ಮಹಾ ನಗರಗಳಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಸಿ ಸೆಕ್ಯೂರಿಟಿ, ಹೌಸ ಕೀಪಿಂಗ್ ಕೆಲಸ, ಲೇಬರ್ ಕೆಲಸಕ್ಕೆ ಕರೆತಂದಿರುತ್ತಾರೆ. 1) ಹಫಿಜ 2)ಷಜ್ಜಾದ 3)ರೆಹಾನ 4)ಬಾಬಿ ರವರಿಗೆ ಉದ್ಯೋಗದ ಆಮಿಷ ಒಡ್ಡಿ ಬಾರತಕ್ಕೆ ಅಕ್ರಮವಾಗಿ ಗಡಿದಾಟಿಸಿ ಬಾರತದ ವಿದೇಶಿಗರ ಕಾಯ್ದೆ ಮತ್ತು ಪಾಸಪೋರ್ಟ ಕಾಯ್ದೆ ಉಲ್ಲಂಘಣೆ ಮಾಡಿರುವ ಮೇರೆಗೆ ಸದರಿರವರನ್ನು ಠಾಣೆಗೆ ಕರೆತಂದು |

| | | | | | |
|---|---|---|---|---|---|
| | | | | | ದೂರು ನೀಡಿದ್ದು ಇಲಿಯಾಶ ಶೇಕ ಬಿನ್ ಮಹಮ್ಮದ ಶೇಖ ಮತ್ತು ಅಬ್ದುಲ ಖದೀರ ತಲುಕ್ದರ ಬಿನ್ ಗೊಲಮ್ ತಲುಕ್ದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೊಟ್ಟ ದೂರು ಇತ್ಯಾದಿ. |
| 04 | ಬೆಂಗಳೂರು ನಗರ | ಬಾಂಗ್ಲಾದೇಶ | ಸಿಸಿಬಿ ಪೊಲೀಸ್ ಠಾಣೆ ಮೊ.ಸಂ 11/2024 ಕಲಂ 370, 465, 471, 468, 120(ಬಿ) ಐಪಿಸಿ ಮತ್ತು ಕಲಂ 14(ಎ) ಫಾರಿನರ್ಸ್ ಆಕ್ಟ್ | ಫಾರಿನರ್ಸ್ ಆಕ್ಟ್ | ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಯಾವುದೇ ದಾಖಲಾತಿಗಳಿಲ್ಲದೆ, ಅಕ್ರಮವಾಗಿ ಭಾರತಕ್ಕೆ ಬಂದು ನಕಲಿ ದಾಖಲಾತಿಗಳ ಮೂಲಕ ಆಧಾರ್ ಕಾರ್ಡ್ ಸೇರಿದಂತೆ ಭಾರತೀಯ ದಾಖಲೆಗಳನ್ನು ಪಡೆದು ಅನಧಿಕೃತವಾಗಿ ವಾಸ ಮಾಡಿಕೊಂಡಿರುವ ಕಾನನೂಲ್ ಇಸ್ಲಾಂ ಈತನ ವಿರುದ್ಧ ಹಾಗೂ ಈತನ ರೀತಿಯೇ ಅಕ್ರಮವಾಗಿ ಬಾಂಗ್ಲಾದೇಶದಿಂದ ಭಾರತಕ್ಕೆ ಬಂದು, ಬೆಂಗಳೂರಿನಲ್ಲಿ ನೆಲೆಸಿರುವ ಈತನ ಸಹಚರರಾದ 1. ಅಲಮೀನ್, 2. ಮೌಸಂ, 3. ಸೋಜಿಬ್, 4. ಮೆಹದಿ, 5. ಹುಸೇನ್ @ ಹುಸೇನ್ ಬಾಂಗ್ಲಾದೇಶಿ, 6. ಅಲ್‌ಮಿನ್, 7. ಮಿಜಾನ್ನುರ್ ಹಾಗೂ ಇವರಲ್ಲದೆ ಕಾಣನುಲ್ ಇಸ್ಲಾಂ ಈತನು ಅಕ್ರಮವಾಗಿ ಭಾರತಕ್ಕೆ ಕರೆದುಕೊಂಡು ಬಂದು ಅಕ್ರಮವಾಗಿ ವೇಶ್ಯಾವಾಟಿಕೆ ಮತ್ತು ಭಿಕ್ಷಾಟನೆಗೆ ತೊಡಗಿರುವ ಅಕ್ರಮ ಬಾಂಗ್ಲಾದೇಶಿಯರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ನೀಡಿದ ದೂರು ಇತ್ಯಾದಿ. |
| 05 | ಬೆಂಗಳೂರು ನಗರ | ಬಾಂಗ್ಲಾದೇಶ | S G Palya 13/2023 U/s 302, 506 498[A] 465, 468, 471, 472, 420 IPC, 14[A][b] Foreigners Act | ಕೊಲೆ | ದಿನಾಂಕ:16/01/2023 ರಂದು ಮಧ್ಯಾಹ್ನ 01.00 ಗಂಟೆ ಸಮಯದಲ್ಲಿ ಪಿರ್ಯಾದುದಾರರಾದ ಶ್ರೀ ಅಯೂಬ್ ಖಾನ್ ರವರು ನೀಡಿದ ದೂರಿನ ಸಾರಾಂಶವೇನೆಂದರೆ, ನಾಶಿರ್ ಹುಸೇನ್ ಪಿರ್ಯಾದುದಾರರ ಮೊಬೈಲ್ ನಂಬರ್ ಗೆ ನಿನ್ನ ತಂಗಿ ನಾಜ್ ಖಾನಂಳನ್ನು ಕೊಲೆ ಮಾಡಿರುವುದಾಗಿ ಆಕೆಯ ಬಾಡಿ ತೆಗೆದುಕೊಂಡು ಹೋಗಿ ಎಂದು ದಿನಾಂಕ:16/01/2023 ರಂದು ಬೆಳಿಗ್ಗೆ 10.02 ಗಂಟೆಗೆ ವಾಟ್ಸ್ಆಪ್ ಮತ್ತು ನಾರ್ಮಲ್ ಮೆಸೇಜ್ ಕಳುಹಿಸಿದ್ದರಿಂದ ಕೂಡಲೇ ತಂಗಿ ನಾಜ್ ಖಾನಂಳ ಬಾಯಿಯಿಂದ ರಕ್ತ ಬಂದಿದ್ದು ಮೂಗಿನಿಂದ ನೊರೆ ಬಂದಿದ್ದು ಆಕೆಯನ್ನು ಕತ್ತು ಹಿಸುಕಿ ಕೊಲೆಮಾಡಿದಂತೆ ಕಂಡು ಬಂದಿರುತ್ತದೆ. ನನ್ನ ತಂಗಿಯ ಶೀಲ ಶಂಕಿಸಿ ನನ್ನ ತಂಗಿಯನ್ನು ಕೊಲೆಮಾಡಿರುವ ಆಕೆಯ ಗಂಡ ನಾಶೀರ್ ಹುಸೇನ್ ನನ್ನು ಪತ್ತೆಮಾಡಿ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು |
| 06 | ಬೆಂಗಳೂರು ನಗರ | Bangladesh. | S G Palya 134/2024 U/S 4(A), 14(B) of Foreigners Act-1946, u/s 12,1A(a)(b) of The Passport Act-1967 | ಡ್ರಗ್ಸ್ | ಬಾಂಗ್ಲಾದೇಶದ ಪ್ರಜೆಯಾದ ಶಮೀಮ್ ಅಹಮ್ಮದ್ ಎಂಬುವವರು ವಾಸ ನಂ-21/69, ಎಫ್ ಕ್ರಾಸ್, 3ನೇ ಮೈನ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಹತ್ತಿರ, ಬಿಸ್ಮಿಲ್ಲಾ ನಗರ, ವಿಟಿಸಿ ಧರ್ಮರಾಂ ಕಾಲೇಜ್ ಪೋಸ್ಟ್, ಬೆಂಗಳೂರು-560029 ರ ಮನೆಯನ್ನು ಜಮೀಲ್ ಎಂಬವವರಿಂದ ಬಾಡಿಗೆಗೆ ಪಡೆದುಕೊಂಡು, ಈತನು ಸದರಿ ಮನೆಯಲ್ಲಿ ಮೊಹಮ್ಮದ್ ಅಬ್ದುಲ್ಲಾ, ನೂರ್ ಜಹಾನ್, ಹರುನ್ ಆಹಮ್ಮದ್ ಎಂಬ 03 ಜನ ಬಾಂಗ್ಲಾದೇಶದ ಪ್ರಜೆಗಳೊಂದಿಗೆ ಅಕ್ರಮವಾಗಿ ವಾಸವಾಗಿರುವುದಾಗಿ ಮಾಹಿತಿ ಖಚಿತ ಪಟ್ಟಿರುತ್ತದೆ. ಆದ್ದರಿಂದ ಅಕ್ರಮವಾಗಿ ಬಾಂಗ್ಲಾದೇಶದಿಂದ ಗಡಿ ಮೂಲಕ ಭಾರತ ದೇಶಕ್ಕೆ ನುಸುಳಿ ಬಂದು ಬೆಂಗಳೂರಿನ ಬಿಸ್ಮಿಲ್ಲಾ ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ಹಾಗೂ ಅನಧೀಕೃತ ದಾಖಲಾತಿಗಳನ್ನು ಸೃಷ್ಟಿ ಮಾಡಿ ಬಳಸಿಕೊಂಡು ಭಾರತ ದೇಶದ ಪಾಸ್ ಪೋರ್ಟ್ ಅನ್ನು ಹೊಂದಿರುವ ಬಾಂಗ್ಲಾದೇಶದ ಪ್ರಜೆಗಳ ವಿರುದ್ಧ ಸೂಕ್ತ ಕಾನೂನು ಕ್ರಮ |

| | | | | | |
|---|---|---|---|---|---|
| | | | and u/s 465, 467, 468, 120(B) of IPC | | ಕೈಗೊಳ್ಳಲು ನೀಡಿದ ದೂರು |
| 07 | ಬೆಂಗಳೂರು ನಗರ | ಬಾಂಗ್ಲಾ | ಪುಟ್ಟೇನಹಳ್ಳಿ ಪೊಲೀಸ್ ಠಾಣಾ ಮೊ.ಸಂ.440/2024, ಕಲಂ.3, 4, 5 ಐಟಿಪಿ ಆಕ್ಟ್ ಮತ್ತು 12(1) ಪಾಸ್ ಪೋರ್ಟ್ ಆಕ್ಟ್. | ಐ.ಟಿ.ಪಿ ಆಕ್ಟ್ | ದಿನಾಂಕ:03/12/2024 ರಂದು ಪುಟ್ಟೇನಹಳ್ಳಿ ಪೊಲೀಸ್ ಠಾಣಾ ಸರಹದ್ದಿನ, ಬಿ.ಜಿ ರಸ್ತೆ, ಅರಕೆರೆ ಮೈಕೋಲೇಔಟ್, ಆರಾಧನಾ ಲೇಔಟ್ ನಲ್ಲಿರುವ ಎಸ್.ಆರ್-1 ಅಪಾರ್ಟಮೆಂಟ್ ನ ಮೊದಲನೇ ಮಹಡಿಯಲ್ಲಿರುವ ಫ್ಲಾಟ್ ನಂಬರ್ ಜಿ-3 ರಲ್ಲಿ ಹುಡುಗಿಯರನ್ನು ಇಟ್ಟುಕೊಂಡು ಗಿರಾಕಿಗಳನ್ನು ಬುಕ್ ಮಾಡಿಕೊಂಡು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಮಾಹಿತಿ ಮೇರೆಗೆ ಧಾಳಿ ಮಾಡಿ ಪರಿಶೀಲನೆ ಮಾಡಿದ್ದು, ಆರೋಪಿ ವಿಜಯ ಕುಮಾರ್ @ಅನೀಶ್ ಖಾನ್ @ ಅಷ್ಮಮ್ ಎಂಬಾತನನ್ನು ವಶಕ್ಕೆ ಪಡೆದು, ಆತನನ್ನು ವಿಚಾರಣೆ ಮಾಡಲಾಗಿ, ಆತನು ಕಳೆದ 02 ವರ್ಷಗಳಿಂದ ಅಕ್ರಮವಾಗಿ ಬೆಂಗಳೂರಿನಲ್ಲಿರುವುದಾಗಿ, ಆತನು ಬಾಂಗ್ಲಾದೇಶದ ಪ್ರಜೆಯಾಗಿದ್ದು, ಯಾವುದೇ ಪಾಸ್ ಪೋರ್ಟ್ ಹಾಗೂ ವೀಸಾ ಪಡೆದು ಭಾರತಕ್ಕೆ ಪ್ರವೇಶ ಮಾಡದೇ, ಕಳ್ಳ ಮಾರ್ಗದಲ್ಲಿ ಭಾರತದ ಗಡಿಯೊಳಗೆ ಬಂದು ಬೆಂಗಳೂರಿನಲ್ಲಿ ನೆಲೆಸಿರುತ್ತಾನೆ. |
| 08 | ಬೆಂಗಳೂರು ನಗರ | ಬಾಂಗ್ಲಾದೇಶ | ವಿಲ್ಸನ್‌ಗಾರ್ಡನ್ Cr.No: 99/2024 U/s 14 Of FOREIGNERS Act | ಅಕ್ರಮವಾಗಿ ನೆಲೆಸಿರುವುದು | ಎಫ್.ಆರ್.ಆರ್.ಓ.ಕಛೇರಿಯ ಪಿ.ಎಸ್‌ಐ.ರವರು ಸದರಿ ಆರೋಪಿತೆಯನ್ನು ಅಕ್ರಮವಾಗಿ ನೆಲೆಸಿರುವ ಸಂಬಂಧ ಹಾಜರು ಪಡಿಸಿ ದೂರು ನೀಡಿದ್ದರಿಂದ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತದೆ. ನಂತರ ಆರೋಪಿತೆಯನ್ನು ಗಡಿಪಾರು ಮಾಡಲಾಗಿರುತ್ತದೆ. |
| 09 | ಬೆಂಗಳೂರು ನಗರ | ಬಾಂಗ್ಲಾದೇಶ | Kadugodi 595/2024 U/S FOREIGNERS ACT, 1946 (U/s-14); THE BHARATIYA NYAYA SANHITA (BNS), 2023 (U/s-336(3), 340(2), 339) | ಅಕ್ರಮವಾಗಿ ಭಾರತದ ಪ್ರಜೆಯೆಂದು ಹೇಳಿಕೊಂಡು ವಿವಿಧ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದು | ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಘನ ನ್ಯಾಯಾಲಯದಲ್ಲಿ ನಿವೇದಿಸಿ ಕೊಳ್ಳುವುದೇನೆಂದರೆ, ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಆಂತರಿಕ ಭದ್ರತಾ ವಿಭಾಗ ರವರ ಕಛೇರಿ, ನಂ.60 ರಿಚ್ಮಂಡ್ ರಸ್ತೆ, ಬೆಂಗಳೂರು ನಗರ ರವರ ಕಛೇರಿ ನಂ.20/ಡಿಎಸ್ಪಿ/ದಾಖಲಾತಿ/ಐಎಸ್ಡಿ/2022 ರಲ್ಲಿ, ಬಾಂಗ್ಲಾದೇಶದ ಪ್ರಜೆಯಾದ ಮೊಹಮ್ಮದ್ ರಂಜಾನ್ @ ಮೊಹಮ್ಮದ್ ರಂಜಾನ್ ಶೇಖ್ ಎಂಬಾತನು ಕಾಡುಗೋಡಿ ಪೊಲೀಸ್ ಠಾಣಾ ಮೊ.ಸಂ.19/2023 ಕಲಂ 323, 306, 201, 504, 506 ಸಹಿತ 34 ಐಪಿಸಿ ಪ್ರಕರಣದಲ್ಲಿ, ಎ-1 ಆರೋಪಿಯಾಗಿದ್ದು, ಪ್ರಸ್ತುತ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದು, ಸದರಿ ಆಸಾಮಿಯ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗಿ, ಸದರಿ ಆರೋಪಿ ಪ್ರಕರಣದ ವಿಚಾರಣೆ ಸಮಯದಲ್ಲಿ ಸ್ವಂತ ವಿಳಾಸ ಪತೇಪುರ ಗ್ರಾಮ, ಬರಗ್ರಾಮ್ ಠಾಣಾ & ಅಂಚೆ, ಉತ್ತರ ದಿನಜಪುರ, ಮಾಲ್ಡಾ ಜಿಲ್ಲೆ, ಪಶ್ಚಿಮ ಬಂಗಾಳ್ ಆಗಿದ್ದು, ಪ್ರಸ್ತುತ ಚಿಕ್ಕಬನಹಳ್ಳಿ ಗ್ರಾಮ, ವಿರ್ಗೋನಗರ ಅಂಚೆ, ಬೆಂಗಳೂರುನಲ್ಲಿ ಕಳೆದ ಸುಮಾರು 8 ವರ್ಷಗಳಿಂದ ತನ್ನ ಎರಡನೇ ಹೆಂಡತಿಯೊದಿಗೆ ವಾಸವಾಗಿರುವುದಾಗಿ ಮತ್ತು ಸುಮಾರು 15 ವರ್ಷಗಳ ಹಿಂದೆ |

| | | | | | |
|---|---|---|---|---|---|
| | | | | | ಈತನು ನೂರ್ ಜಹಾನ್ ಎಂಬಾಕೆಯೊದಿಗೆ ಮದುವೆಯಾಗಿದ್ದು, ಆಕೆಯನ್ನು ಬಿಟ್ಟು ಬಂದಿರುವುದಾಗಿ ತಿಳಿಸಿರುತ್ತಾನೆ.<br>ಮಹಮ್ಮದ್ ರಂಜಾನ್‌ನ ಮೊದಲನೇ ಹೆಂಡತಿಯಾದ ಶ್ರೀಮತಿ ನೂರ್ ಜಹಾನ್ ಬೇಗಂ ರವರು ದಿನಾಂಕ:28/01/2023 ರಂದು ಮೆಡಿಕಲ್ ವಿಸಾದಲ್ಲಿ ಭಾರತಕ್ಕೆ ಬಂದು ದಿನಾಂಕ:22/02/2023 ರಂದು ಬಾಂಗ್ಲಾ ದೇಶದ ಪ್ರಜೆಯಾದಂತಹ ಮಹಮ್ಮದ್ ರಂಜಾನ್ ಶೇಖ್ ಅನ್ನು ಬಾಂಗ್ಲಾದಲ್ಲಿ ಮದುವೆ ಮಾಡಿಕೊಂಡಿದ್ದು, ನಮಗೆ ಇಬ್ಬರೂ ಹೆಣ್ಣು ಮಕ್ಕಳಿರುತ್ತಾರೆ. ಈಗ್ಗೆ ಸುಮಾರು 6 ವರ್ಷಗಳ ಹಿಂದೆ ಈತನು ಭಾರತ ದೇಶಕ್ಕೆ ರಹದಾರಿ ಪತ್ರದೊಂದಿಗೆ ಬಂದು ವಾಪಸ್ಸು ಬಾಂಗ್ಲಾ ದೇಶಕ್ಕೆ ಹೋಗದೆ ಅಕ್ರಮ ಮತ್ತು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾನೆ. ಇತ್ತೀಚಿಗೆ ಕಾಡುಗೋಡಿ ಠಾಣೆಯ ಮೇಲ್ಕಂಡ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದು, ಈತನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸದೇ ವಿದೇಶಿಯರ ಬಂಧನ ಕೇಂದ್ರದಲ್ಲಿರಿಸಿ ಪ್ರಕರಣ ಮುಕ್ತಾಯವಾದ ನಂತರ ಬಾಂಗ್ಲಾ ದೇಶಕ್ಕೆ ಕಳುಹಿಸಿಕೊಡುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.<br>ಇದೇ ವಿಚಾರವಾಗಿ ದಿನಾಂಕ:26/10/2023 ರಂದು ಬ್ಯುರೋ ಆಫ್ ಇಮಿಗ್ರೇಷನ್ ಅಧಿಕಾರಿಗಳು ಮಹಮ್ಮದ್ ಸಾದಿಕ್, ಚಿಕ್ಕಬನಹಳ್ಳಿ, ಕನ್ನಮಂಗಲ ಅಂಚೆ, ಬೆಂಗಳೂರು (ಪಾಸಪೋರ್ಟ ನಂ.ಆರ್3951275) ಈತನ ಜಾಮೀನಿನ ಮೇಲೆ ಮೊಹಮ್ಮದ್ ರಂಜಾನ್ ಶೇಖ್ ನನ್ನು ಪ್ರತಿ ಮಾಹೆಯ 1ನೇ & 3ನೇ ಸೋಮವಾರ FRRO ಕಛೇರಿಯಲ್ಲಿ ಭಾರತದಿಂದ ನಿರ್ಗಮಿಸುವವರೆಗೂ ಹಾಜರುಪಡಿಸುವ ಷರತ್ತಿನೊಂದಿಗೆ ಬಿಡುಗಡೆಗೊಂಡಿರುತ್ತಾರೆ. ಅದರಂತೆ ಮೊಹಮ್ಮದ್ ರಂಜಾನ್ 06/11/2023 ರಿಂದ 26/03/2024 ರವರೆಗೆ ಹಾಜರಾಗಿ ತದನಂತರ ಗೈರು ಹಾಜರಾಗಿ ಪುನಃ ದಿನಾಂಕ:20/08/2024 ರಂದು ಹಾಜರಾಗಿರುವುದು ಕಂಡುಬಂದಿರುತ್ತದೆ.<br><br>ಮೊಹಮ್ಮದ್ ರಂಜಾನ್ ಮೂಲತಃ ಬಾಂಗ್ಲಾದೇಶದ ಪ್ರಜೆಯಾಗಿದ್ದು, ಮೇಲ್ಕಂಡ ಪ್ರಕರಣದಲ್ಲಿ ದಸ್ತಗಿರಿಯಾದ ಸಮಯದಲ್ಲಿ ಬಾಂಗ್ಲಾದೇಶದ ಪ್ರಜೆ ಎಂಬುವುದನ್ನು ಮರೆಮಾಚಿ ಅಕ್ರಮವಾಗಿ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಪಡೆದುಕೊಂಡಿರುವ ಜನನ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಿ ತನ್ನ ಸ್ವಂತ ಸ್ಥಳವೆಂದು ಸುಳ್ಳು ಹೇಳಿರುವುದು ತಿಳಿದುಬಂದಿರುತ್ತದೆ. ಈತನು 2012ನೇ ಸಾಲಿನಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದಿಂದ ಭಾರತ ಚುನಾವಣಾ ಆಯೋಗದ ವೋಟರ್ ಐಡಿ ಕಾರ್ಡ್ ಮತ್ತು 2016ನೇ ಸಾಲಿನಲ್ಲಿ ಕೆ. ಆರ್. ಪುರಂ RTOದಿಂದ ಚಾಲನಾ ಪರವಾನಿಗೆಯನ್ನು ಪಡೆದುಕೊಂಡಿರುವುದು ಕಂಡುಬಂದಿರುತ್ತದೆ.<br><br>ಮಹಮ್ಮದ್ ರಂಜಾನ್ ಶೇಖ್ ಈತನು ದಿನಾಂಕ:08/03/2021 ರಂದು ಅಧಿಕೃತವಾಗಿ ಮೆಡಿಕಲ್ ವಿಸಾ ಪಡೆದು ಭಾರತಕ್ಕೆ ಆಗಮಿಸಿ ಅಕ್ರಮ ಮಾರ್ಗವಾಗಿ FRRO ಕಛೇರಿಗೆ ಯಾವುದೇ ಮಾಹಿತಿ ಇಲ್ಲದೇ ಬಾಂಗ್ಲಾದೇಶಕ್ಕೆ ಹೋಗಿರುವುದು ಕಂಡುಬಂದಿರುತ್ತದೆ. ಈತನ ಪಾಸ್ಪೋರ್ಟ ನಂ.A001123310 ಅನ್ನು ಉಪಯೋಗಿಸಿಕೊಂಡು ದಿನಾಂಕ:16/05/2024 ರಂದು ಮತ್ತೆ |

| | | | | | |
|---|---|---|---|---|---|
| | | | | | ಬಾಂಗ್ಲಾದೇಶದಿಂದ ಮೆಡಿಕಲ್ ವಿಸಾ ಪಡೆದುಕೊಂಡು ಕಾಡುಗೋಡಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ಬಂದು ನೆಲೆಸಿ ದಿನಾಂಕ:06/09/2024 ರಂದು ವಾಪಸ್ಸು ಬಾಂಗ್ಲಾದೇಶಕ್ಕೆ ಹೋಗಿ ಪುನಃ ದಿನಾಂಕ:20/09/2024 ರಂದು ಮೆಡಿಕಲ್ ವಿಸಾದಡಿಯಲ್ಲಿ ಭಾರತಕ್ಕೆ ಬಂದಿದ್ದು, ಈತನ ಮೆಡಿಕಲ್ ದಾಖಲೆಗಳ ನೈಜತೆಯನ್ನು ಪರಿಶೀಲಿಸಬಹುದಾಗಿರುತ್ತದೆ. ಈತನ ಬಾಂಗ್ಲಾ ದೇಶದ ಐಡಿ ನಂ.2408294508 ಮತ್ತು ಬಾಂಗ್ಲಾದೇಶದ ನರೈಲಿಯಲ್ಲಿ 2019-20ನೇ ಸಾಲಿನಲ್ಲಿ ಪಡೆದುಕೊಂಡಿರುವ ಚಾಲನಾ ಕಲಿಕ ಪರವಾನಿಗೆಯ ಪ್ರತಿಯನ್ನು ಲಗತ್ತಿಸಿದೆ. ಈ ಹಿನ್ನಲೆಯಲ್ಲಿ ಮಹಮ್ಮದ್ ರಂಜಾನ್ ಮೂಲತಃ ಬಾಂಗ್ಲಾದೇಶದ ಪ್ರಜೆಯೆಂದು ಸ್ಪಷ್ಟವಾಗುತ್ತಿದ್ದು, ಈತನು ಅಕ್ರಮವಾಗಿ ಭಾರತದ ಪ್ರಜೆಯೆಂದು ಹೇಳಿಕೊಂಡು ವಿವಿಧ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದು ತಿಳಿದುಬಂದಿರುತ್ತದೆ.<br><br>ಆದ್ದರಿಂದ ಈ ದಿನ ದಿನಾಂಕ:25/10/2024 ರಂದು 16:15 ಗಂಟೆಯಲ್ಲಿ ಸದರಿ ಆಸಾಮಿಯ ವಿರುದ್ಧ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.595/2024 ಕಲಂ 14 ಆಫ್ ಫಾರೀನರ್ಸ್ ಆಕ್ಟ್ ಮತ್ತು ಕಲಂ 336(3), 340(2), 339 ಬಿ.ಎನ್.ಎಸ್. ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. |
| 10 | ಬೆಂಗಳೂರು ನಗರ | ಬಾಂಗ್ಲಾದೇಶ | Kadugodi CR NO:99/2025 FOREIGNERS ACT, 1946 (U/s-14 (A)); THE BHARATIYA NYAYA SANHITA (BNS), 2023 (U/s-336(3), 339, 340(2)) | ಅಕ್ರಮವಾಗಿ ಭಾರತದ ಪ್ರಜೆಯೆಂದು ಹೇಳಿಕೊಂಡು ವಿವಿಧ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದು | ನಂ.ಸಿಎಸ್ಬಿ/ಅಡ್ಮಿನ್/ಎಫ್.ಆರ್/57/2025 ರಲ್ಲಿ ಬಾಂಗ್ಲಾದೇಶದ ಪ್ರಜೆಯಾದ ಮೊಹಮ್ಮದ್ ಸಿದ್ದಿಕ್ ಹೌಲದಾರ್ @ ಮೊಹಮ್ಮದ್ ಸಿದ್ದಿಕ್ (Bangladesh National ID No.6215894255130), ಎಂ.ಎಸ್. ವಿಲೇಜ್ ರೆಸಿಡೆನ್ಸಿ ಹತ್ತಿರ, ಶೆಡ್ ನಂ.55/3, ಬಿದಿರೆ ಅಗ್ರಹಾರ, ದೊಡ್ಡಬನಹಳ್ಳಿ, ಬೆಂಗಳೂರು-49 ಎಂಬಾತನು ಬಾಂಗ್ಲಾದೇಶದ ಅಕ್ರಮ ವಲಸಿಗನಾಗಿರುತಾ . ಸದರಿ ವ್ಯಕ್ತಿಯು ಬಾಂಗ್ಲಾದೇಶದ ಪ್ರಜೆಯಾಗಿದ್ದರೂ ಸಹ, ಭಾರತದ ಪಶ್ಚಿಮ ಬಂಗಾಳ ರಾಜ್ಯದ ಮಲ್ಡಾ ಜಿಲ್ಲೆ, ಗಾಲಿಂಪುರ್ ಅಂಚೆ, JADUPUR HIGH SCHOOL (Government Sponsored) ಶಾಲೆಯಲ್ಲಿ ವ್ಯಾಸಂಗ ಮಾಡಿರುತೇನೆಂದು, ಸದರಿ ಶಾಲೆಯಿಂದ ಕೊಡಲ್ಪಟ್ಟಂತೆ ಮೊಹಮ್ಮದ್ ಸಿದ್ದಿಕ್ (ಮೊಬೈಲ್ ನಂ.8073064851, 8105233029, 8967761414) ಎಂಬ ಹೆಸರಿನಲ್ಲಿ ನಕಲಿ ವರ್ಗಾವಣೆ ಪತ್ರವನ್ನು ಸೃಷ್ಟಿ ಮಾಡಿಸಿಕೊಂಡು ಭಾರತದ ರಹದಾರಿ ಪತ್ರ, Voter ID ಮತ್ತು ಇತರೆ ಭಾರತೀಯ ದಾಖಲಾತಿಗಳನ್ನು ಮಾಡಿಸಿಕೊಂಡಿರುತ್ತಾನೆ. ಹಾಗೂ ಈತನ ಬೆಂಗಳೂರಿನಲ್ಲಿ ಅಕ್ರಮವಾಗಿ ವಾಸವಿರುವ ಬಾಂಗ್ಲಾ ವಲಸಿಗರಿಂದ ಹಣ ಪಡೆದುಕೊಂಡು, ಭಾರತೀಯ ದಾಖಲಾತಿಗಳಾದ Passport, Pan Card ಗಳನ್ನು ಮಾಡಿಸಿಕೊಂಡಿರುತ್ತಾನೆ. ಇವನ ಜೊತೆಗೆ ಇನ್ನೂ 15-20 ಜನ ಅಕ್ರಮ ಬಾಂಗ್ಲಾ ವಲಸಿಗರು ಸ್ಕ್ರ್ಯಾಪ್ ಸಂಗ್ರಹ ಮಾಡುವ ಕೆಲಸ ಮಾಡುತ್ತಿರುವುದು ಕಂಡುಬಂದಿದೆ. ಇದರೊಂದಿಗೆ ಇವನ ಭಾರತೀಯ ದಾಖಲಾತಿಗಳು ಹಾಗೂ ಬಾಂಗ್ಲಾದೇಶದ ಪ್ರಜೆ ಎನ್ನುವ ನ್ಯಾಷನಲ್ ಐಡಿ ಕಾರ್ಡ್ ಪ್ರತಿಗಳನ್ನು ಲಗತ್ತಿಸಿದೆ. ಆದ್ದರಿಂದ ಸದರಿ ವ್ಯಕ್ತಿಯನ್ನು ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಜ್ಞಾಪನದಲ್ಲಿ ಸೂಚಿಸಿರುತ್ತಾರೆ. ಅದರಂತೆ ನಾನು ಸದರಿ ಮಾಹಿತಿಯನ್ನು ಪೊಲೀಸ್ ಇನ್ಸ್‌ಪೆಕ್ಟರ್ ರವರಿಗೆ ತಿಳಿಸಿ, ಅವರ ಸಲಹೆ ಸೂಚನೆಯಂತೆ ಈ ದಿನ ದಿನಾಂಕ: 06/03/2025 ರಂದು ಸಂಜೆ ಸುಮಾರು 5:45 ಗಂಟೆಯಲ್ಲಿ ಠಾಣೆಯ ಸಿಬ್ಬಂದಿಯವರಾದ ಶ್ರೀ ಮಹಾಂತೇಶ್ |

| | | | | | |
|---|---|---|---|---|---|
| | | | | | ಸರ್ವಿ, ಪಿ.ಸಿ.16268 ಮತ್ತು ಶ್ರೀ ಹೇಮಂತ್, ಪಿ.ಸಿ.13252 ರವರೊಂದಿಗೆ ಮೇಲ್ಕಂಡ ವಿಳಾಸಕ್ಕೆ ಹೋಗಿ ನೋಡಲಾಗಿ, ಮನೆಯಲ್ಲಿ ಒಬ್ಬ ಆಸಾಮಿ ಇದ್ದು, ಆತನ ಹೆಸರು ವಿಳಾಸ ಕೇಳಲಾಗಿ, ಮೊಹಮ್ಮದ್ ಸಿದ್ದಿಕ್ ಹೌಲದಾರ್ @ ಮೊಹಮ್ಮದ್ ಸಿದ್ದಿಕ್, 55 ವರ್ಷ ಎಂದು ತಿಳಿಸಿದನು. ನಂತರ ಸದರಿ ಆಸಾಮಿಗೆ ಮೇಲ್ಕಂಡ ಮಾಹಿತಿ ಮತ್ತು ದಾಖಲಾತಿಗಳಿಗೆ ಸಂಬAಧಿಸಿದAತೆ ವಿಚಾರಣೆ ಮಾಡಲಾಗಿ, "ತಾನು ಮೂಲತಃ ಬಾಂಗ್ಲಾದೇಶದ ಪ್ರಜೆಯಾಗಿದ್ದು, 2006 ರಲ್ಲಿ ಅಕ್ರಮವಾಗಿ ಪಶ್ಚಿಮ ಬಂಗಾಳದ ರಾಜ್ಯದ ಮೂಲಕ ಬೆಂಗಳೂರಿಗೆ ಬಂದು ವಾಸವಾಗಿರುತ್ತೇನೆ. ಬೆಂಗಳೂರು ನಗರದ ಥಣಿಸಂದ್ರದ ಆಸಾಮಿಯೊಬ್ಬನು ನನಗೆ Pan Card, ಚುನಾವಣಾ ಗುರುತಿನ ಚೀಟಿಗಳನ್ನು ಮಾಡಿಸಿಕೊಟ್ಟಿರುತ್ತಾನೆ ಮತ್ತು ಸ್ಕೂಲ್ ಸರ್ಟಿಫಿಕೇಟ್ ಅನ್ನು ಭಾರತದ Passport ಮಾಡಿಸಿಕೊಟ್ಟ ಏಜೆಂಟ್ ಮಾಡಿಸಿಕೊಟ್ಟಿರುತ್ತಾನೆ" ಎಂದು ತಿಳಿಸಿದನು. ಸದರಿ ಆಸಾಮಿಯು ಮೂಲತಃ ಬಾಂಗ್ಲಾದೇಶದ ಪ್ರಜೆಯಾಗಿದ್ದು, ಅಕ್ರಮವಾಗಿ ಭಾರತದ ಪ್ರಜೆಯೆಂದು ಹೇಳಿಕೊಂಡು ನಕಲಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸಂಬಂಧಪಟ್ಟ ಸರ್ಕಾರಿ ಪ್ರಾಧಿಕಾರಗಳಿಗೆ ಸಲ್ಲಿಸಿ ಭಾರತದ ವಿವಿಧ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದಲ್ಲದೆ, ಇತರೆ ಬಾಂಗ್ಲಾದೇಶದ ಪ್ರಜೆಗಳಿಗೂ ಮಾಡಿಸಿಕೊಟ್ಟಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಮೊಹಮ್ಮದ್ ಸಿದ್ದಿಕ್ ಹೌಲದಾರ್ @ ಮೊಹಮ್ಮದ್ ಸಿದ್ದಿಕ್ ಎಂಬುವನನ್ನು ಈ ದಿನ 20:00 ಗಂಟೆಯಲ್ಲಿ ಠಾಣೆಗೆ ಕರೆತಂದು ಸದರಿ ಆಸಾಮಿಯ ವಿರುದ್ಧ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.99/2025 ಕಲಂ 14(ಎ) ಆಫ್ ಫಾರೀನರ್ಸ್ ಆಕ್ಟ್ ಮತ್ತು ಕಲಂ 336(3), 340(2), 339 ಬಿ.ಎನ್.ಎಸ್. ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. |
| 11 | ಬೆಂಗಳೂರು ನಗರ | ಬಾಂಗ್ಲಾದೇಶ | ಮಾರತ್ತಹಳ್ಳಿ CR NO:605/2025 ಕಲಂ. U/S 196,298,299 ಬಿ.ಎನ್.ಎಸ್ ಆಕ್ಟ್ | Foreigners Act | ಈ ದೂರಿನ ಸಾರಾಂಶವೇನೆಂದರೆ, ಪಿರ್ಯಾದುದಾರರು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತಾರೆ. ಪಿರ್ಯಾದುದಾರರು ದೇವರಬಿಸನಹಳ್ಳಿಯ ವಾಸಿಯಾಗಿರುತ್ತಾರೆ. ದೇವರಬಿಸನಹಳ್ಳಿ ಗ್ರಾಮದಲ್ಲಿರುವ ಪ್ರಾಚೀನ ಕಾಲದ ಶ್ರೀ ವೇಣು ಗೋಪಾಲಸ್ವಾಮಿ ದೇವಾಲಯ ಇರುತ್ತದೆ ದಿನಾಂಕ:26.10.2025 ರಂದು ಬೆಳಿಗ್ಗೆ 08:56 ಗಂಟೆಯ ಸಮಯದಲ್ಲಿ ಕಬೀರ್, 37 ವರ್ಷದ ವ್ಯಕ್ತಿಯು ಯಾವುದೋ ದುರುದ್ದೇಶದಿಂದ ದೇವಸ್ಥಾನಕ್ಕೆ ಕಲ್ಲು ಎಸೆದು, ನಂತರ ದೇವಸ್ಥಾನದ ಒಳಗೆ ಚಪ್ಪಲಿ ಕಾಲಿನಿಂದ ಒಳಗೆ ಪ್ರವೇಶ ಮಾಡಿ ದೇವರ ವಿಗ್ರವನ್ನು ಚಪ್ಪಲಿಯಿಂದ ತುಳಿದು ನಂತರ ಕೈಯಿಂದ ಚಪ್ಪಲಿ ತೆಗೆದುಕೊಂಡು ದೇವರ ವಿಗ್ರಹಕ್ಕೆ ಹೊಡೆದು ನಂತರ ವೇಸ್ಟ್ ಆಯಿಲ್ ನಿಂದ ದೇವರಿಗೆ ಹಾಕಲು ಮುಂದಾದಾಗ ಅಲ್ಲೇ ಇದ್ದ ಭಕ್ತದಿಗಳಾದ ದಯಾನಂದ ಮತ್ತು ಹರೀಶ್ ಹಾಗೂ ಇತರರು ಅದನ್ನು ತಡೆಯಲು ಹೋದಾಗ ಅವರ ಮೇಲೆ ಕೈಯಿಂದ ಹಲ್ಲೆ ಮಾಡಿರುತ್ತಾನೆ. ಸದರಿ ಕಬೀರ್ ಎಂಬ ವ್ಯಕ್ತಿಯನ್ನು ವಿಚಾರಿಸಲಾಗಿ ನಾನು ಬಾಂಗ್ಲದೇಶದ ನಿವಾಸಿಯಾಗಿರುತ್ತೇನೆಂದು ಮತ್ತು ತಾನು ಮುಸ್ಲಿಂ ಸಮುದಾಯಕ್ಕೆ ಸೇರಿರುವುದಾಗಿ ತಿಳಿಸಿ, ಅಲ್ಲಾ ಹೊ ಅಕ್ಬರ್ ಎಂದು ಕೂಗಿರುತ್ತಾನೆ. ಆದ್ದರಿಂದ ನಮ್ಮ ಹಿಂದೂ ಧಾರ್ಮಿಕ ನಂಬಿಕೆಗಳಿಗೆ ಮತ್ತು ಭಾವನೆಗಳಿಗೆ ಭಂಗವನ್ನುಂಟು ಮಾಡುವ ದ್ವೇಷದ ಉದ್ದೇಶದಿಂದ ಹಾಗೂ ಹಿಂದೂ ಸೌಹಾರ್ದತೆಗೆ ದಕ್ಕೆವುಂಟು ಮಾಡುವ ಉದ್ದೇಶದಿಂದ |

| | | | | | |
|---|---|---|---|---|---|
| | | | | | ದೇವರಬಿಸನಹಳ್ಳಿಯ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನಕ್ಕೆ ಕಲ್ಲು ಎಸೆದು, ದೇವಸ್ಥಾನದ ಒಳಗೆ ಚಪ್ಪಲಿ ಕಾಲಿನಿಂದ ಒಳಗೆ ಪ್ರವೇಶ ಮಾಡಿ ದೇವರ ವಿಗ್ರಹವನ್ನು ಚಪ್ಪಲಿಯಿಂದ ತುಳಿದು, ಕೈಯಿಂದ ಚಪ್ಪಲಿ ತೆಗೆದುಕೊಂಡು ದೇವರ ವಿಗ್ರಹಕ್ಕೆ ಹೊಡೆದು ಹಿಂದೂ ಧಾರ್ಮಿಕ ನಂಬಿಕೆಗಳಿಗೆ ಅವಮಾನ ಮಾಡಿರುವ ಬಾಂಗ್ಲಾದೇಶದ ನಿವಾಸಿಯಾದ ಕಬೀರ್ ರವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ. |
| 12 | ಬೆಂಗಳೂರು ನಗರ | ಬಾಂಗ್ಲಾದೇಶ | ಹೆಚ್.ಎ.ಎಲ್ CR NO. Crime No. 355/2025 U/s 14(A) of the Foreigners Act and 318(4), 340(2) BNS, | Foreigners Act | ಈ ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕ:19/06/2025 ರಂದು ಮಾನ್ಯ ಪೊಲೀಸ್ ಆಯುಕ್ತರ ಕಛೇರಿಯಿಂದ ಬಂದ ಜ್ಞಾಪನದಂತೆ, ಹೆಚ್.ಎ.ಎಲ್. ಪೊಲೀಸ್ ಠಾಣಾ ಸರಹದ್ದಿನ ಮಾರತ್ತಹಳ್ಳಿಯಲ್ಲಿರುವ ಲೇಖನ ಸೈಬರ್ ಮತ್ತು ಸ್ಟೇಷನರಿ ಸೆಂಟರ್‌ನ ಮಾಲೀಕ ಮಂಜುನಾಥ ಎಂ.ಸಿ. ಎಂಬುವವರು ಶಂಕಿತ ಅಕ್ರಮ ಬಾಂಗ್ಲಾದೇಶಿ ಪ್ರಜೆಗಳಿಂದ ಹಣ ಮತ್ತು ಭಾವಚಿತ್ರ ಪಡೆದು ನಕಲಿ ದಾಖಲಾತಿ ಹಾಗೂ ವಿಳಾಸ ಸೃಷ್ಟಿಸಿ, ಮಾರತ್ತಹಳ್ಳಿ ಅಂಚೆ ಕಛೇರಿಯಲ್ಲಿ ಆಧಾರ್ ಕೆಲಸ ಮಾಡುತ್ತಿದ್ದ ಪುಷ್ಪಾಂಜಲಿ ಎಂಬುವವರೊಂದಿಗೆ ಶಾಮೀಲಾಗಿ ಬಯೋಮೆಟ್ರಿಕ್ ನೋಂದಣಿ ಮಾಡಿಸಿಕೊಡುತ್ತಿದ್ದಾರೆಂಬ ಮಾಹಿತಿ ಲಭ್ಯವಾಗಿರುತ್ತದೆ. ಅದರಂತೆ, ದಿನಾಂಕ:24.04.2025 ರಂದು ಶಂಕಿತ ಬಾಂಗ್ಲಾದೇಶಿ ಪ್ರಜೆಗಳಾದ ಎಂ.ಡಿ. ರಫೀಕ್ ಉಲ್ಲಾ ಹಾಗೂ ನೂರ್ ಜಹಾನ್ ಕೊಂ ಅಬ್ದುಲ್ ರಬ್ ರವರ ಬಯೋಮೆಟ್ರಿಕ್ ನೋಂದಣಿ ಮಾಡಿಸಿರುವುದು ಮತ್ತು ಮಂಜುನಾಥ್ ರವರು ಈ ಹಿಂದೆ ಸಹ ಹಲವು ಶಂಕಿತ ಅಕ್ರಮ ಬಾಂಗ್ಲಾದೇಶಿ ಪ್ರಜೆಗಳಿಗೆ ಆಧಾರ್ ಕಾರ್ಡ್ ಮಾಡಿಸಿಕೊಟ್ಟಿರುವುದು ತಿಳಿದುಬಂದಿರುತ್ತದೆ. ಈ ಕುರಿತು ಸೂಕ್ತ ಕಾನೂನು ಕ್ರಮ ಕೈಗೊಂಡು, ಅಕ್ರಮವಾಗಿ ಪಡೆದ ಭಾರತೀಯ ಗುರುತಿನ ಚೀಟಿಗಳನ್ನು ರದ್ದುಪಡಿಸಲು ಸಂಬಂಧಪಟ್ಟ ಪ್ರಾಧಿಕಾರದೊಂದಿಗೆ ಸಮನ್ವಯ ಸಾಧಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ, ಪೊಲೀಸ್ ಇನ್‌ಸ್ಪೆಕ್ಟರ್ ರವರು ಪಿರ್ಯಾದುದಾರರು ಹಾಗೂ ಠಾಣಾ ಸಿಬ್ಬಂದಿಯವರಿಗೆ ಆರೋಪಿತರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ದಿನಾಂಕ:23.07.2025 ರಂದು ಮಧ್ಯಾಹ್ನ 03:30 ಗಂಟೆಗೆ ಸಿಬ್ಬಂದಿಯೊಂದಿಗೆ, ಲಭ್ಯವಾದ ಮೊಬೈಲ್ ಸಿಮ್ ಮಾಹಿತಿ ಹಾಗೂ ಖಚಿತ ಭಾತ್ಮಿದಾರರ ಮಾಹಿತಿಯ ಮೇರೆಗೆ ಬೆಂಗಳೂರು ನಗರದ ದೊಡ್ಡ ಕಮ್ಮನಹಳ್ಳಿ, ಒಮ್ಮ ದೇವನಹಳ್ಳಿ ರಸ್ತೆ ಬಳಿಯ ಶೆಡ್ ಬಳಿ ತೆರಳಿ ಪರಿಶೀಲಿಸಿದಾಗ, ನೂರ್ ಜಹಾನ್ ಕೊಂ ಅಬ್ದುಲ್ ರಬ್ ಎಂಬ ಮಹಿಳೆ ಚಿಕ್ಕ ಮಗುವಿನೊಂದಿಗೆ ವಾಸಿಸುತ್ತಿರುವುದು ಕಂಡುಬಂದಿರುತ್ತದೆ. ವಿಚಾರಣೆ ವೇಳೆ ಆಕೆ ತಾನು ಮೂಲತಃ ಬಾಂಗ್ಲಾದೇಶದ ಪ್ರಜೆಯಾಗಿದ್ದು, Binakul Village, Satkhira District, Bangladesh-9400 ತನ್ನ ಸ್ವಂತ ವಿಳಾಸವೆಂದು ತಿಳಿಸಿ, ಸುಮಾರು 10 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಮೂಲಕ ಬೆಂಗಳೂರಿಗೆ ಬಂದು ವಾಸವಾಗಿರುವುದಾಗಿ ಹಾಗೂ ದಿನಾಂಕ:24.04.2025 ರಂದು ಮಾರತ್ತಹಳ್ಳಿಯ ಸೈಬರ್ ಮತ್ತು ಸ್ಟೇಷನರಿ ಸೆಂಟರ್‌ನಲ್ಲಿ ಆಧಾರ್ ಕಾರ್ಡ್ ಮಾಡಿಸಿಕೊಳ್ಳಲು ಬಯೋಮೆಟ್ರಿಕ್ ನೀಡಿರುವುದಾಗಿ ತಿಳಿಸಿರುತ್ತಾಳೆ. ಸದರಿ ಮಹಿಳೆಯು ಅಕ್ರಮವಾಗಿ ಭಾರತದಲ್ಲಿ ವಾಸವಾಗಿದ್ದು, ಭಾರತೀಯ ಗುರುತಿನ ಚೀಟಿಯನ್ನು ಪಡೆಯಲು ಪ್ರಯತ್ನಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ, ಆಕೆಯನ್ನು ಮಹಿಳಾ ಸಿಬ್ಬಂದಿಯೊಂದಿಗೆ ಠಾಣೆಗೆ ಕರೆತಂದು, ಆಕೆಯ ವಿರುದ್ಧ |

| | | | | | |
|---|---|---|---|---|---|
| | | | | | ಹಾಗೂ ಆಧಾರ್ ಕಾರ್ಡ್ ಮಾಡಿಸಿಕೊಳ್ಳಲು ಸಹಕರಿಸಿದ ಇತರರ ವಿರುದ್ಧ ಹೆಚ್.ಎ.ಎಲ್. ಪೊಲೀಸ್ ಠಾಣೆಯಲ್ಲಿ ಠಾಣಾ ಮೊ.ಸಂ.355/2025, ಕಲಂ 14(ಎ) Foreigners Act ಹಾಗೂ ಕಲಂ 340(2), 318(4) BNS ರೀತ್ಯಾ ಸ್ವಯಂ ದೂರು ದಾಖಲಿಸಿಕೊಂಡಿರುತ್ತದೆ. |
| 13 | ಬೆಂಗಳೂರು ನಗರ | ಅಮಿತ್ ಸರ್ಕಾರ Balasur Village, Vagyakul Post Sreenagar PS, Munshijang Dist Bangladesh | ಕೆ.ಐ.ಎ CR NO: 0014/2026 U/s FOREIGNERS ACT, 1946 U/s: 14(b), PASSPORTS ACT, 1967 U/s: 12, 1A (a), (b), 336, 340(2) BNS | FOREIGNERS ACT | ದಿನಾಂಕ: 14.02.2026 ರಂದು ಸಂಜೆ ಸುಮಾರು 19.00 ಗಂಟೆ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಅಮಿತ್ ಸರ್ಕಾರ ಎಂಬ ಪ್ರಯಾಣಿಕನು ದಿನಾಂಕ-14.02.2026 ರಂದು ಬ್ರಹೇನ್ ದೇಶದಿಂದ ಬೆಂಗಳೂರಿಗೆ ಬರಲು ಗಲ್ಫ್ ಏರ್ ಲೈನ್ಸ್ ಟಿಕೇಟ್ ಬುಕ್ ಮಾಡಿಕೊಂಡು ಬಂದಿದ್ದು, ಅವರನ್ನು ಪರಿಶೀಲನೆಗೆ ಒಳಪಡಿಸಿ ದಾಖಲಾತಿಗಳನ್ನು ಪರಿಶೀಲಿಸಿದಾಗ ಮೂಲತಃ ಬಾಂಗ್ಲಾದೇಶದ ಪ್ರಜೆಯಾಗಿದ್ದು, ಈತನ ಭಾರತೀಯ ಪಾಸ್ಪೋರ್ಟ್, ಭಾರತೀಯ ಚುನಾವಣಾ ಗುರುತಿನ ಚೀಟಿ ನಕಲು, ಬಾಂಗ್ಲಾದೇಶದ ಪಾಸ್ಪೋರ್ಟ್, ಬಾಂಗ್ಲಾದೇಶದ ಜನನ ಪ್ರಮಾಣ ಪತ್ರ, ಹೊಂದಿದ್ದು, ಭಾರತ ದೇಶದ ನಕಲು ಪಾಸ್ಪೋರ್ಟ್, ಮತ್ತು ಚುನಾವಣಾ ಗುರುತಿನ ಚೀಟಿ ಹೊಂದಿರುತ್ತಾನೆ. ಸದರಿ ಆಸಾಮಿಯೂ ತನ್ನ ದೇಶದ ರಾಷ್ಟ್ರೀಯತೆಯನ್ನು ಮರೆಮಾಚಿ ಭಾರತೀಯ ದಾಖಲಾತಿಗಳನ್ನು ಮಾಡಿಸಿಕೊಂಡು ಅಕ್ರಮವಾಗಿ ಭಾರತ ದೇಶದಲ್ಲಿ ನೆಲೆಸಿರುವ ಆಸಾಮಿಯ ವಿರುದ್ಧ ಮುಂದಿನ ಕ್ರಮಕ್ಕಾಗಿ ಕೋಟ್ಟ ದೂರು ಇತ್ಯಾದಿ. |
| 14 | ಬೆಂಗಳೂರು ನಗರ | Bangladesh | ಬಾಣಸವಾಡಿ 149/2025. u/s 318(2) BNS-2023 u/s 14 of Foreigners Act and 66(c) 66(D) IT Act | ಐಟಿ ಆಕ್ಟ್ | ಈ ದೂರಿನ ಸಾರಂಶವೇನೆಂದರೆ ದಿನಾಂಕ: 14/03/2025 ರಂದು ಪಿರ್ಯಾದುದಾರರಾದ ಎಂಡಿ ನೊಮನ್ ಹಮೀದ್, ಬಾಂಗ್ಲಾದೇಶ ರಾಷ್ಟ್ರೀಯ ಪ್ರಜೆಯಾಗಿದ್ದು, ಫಾಸ್ ಫೋರ್ಟ್ ನಂ B00030761 ಮತ್ತು ವೀಸಾ ನಂ VL5570123 ವಾಯಿದೆ 14-11-2025, ವಾಸ: ನಂ 18, 3ನೇ ಕ್ರಾಸ್, ಗುಳ್ಳಮ್ಮ ರಸ್ತೆ, ಕೆ.ಕೆ ಹಳ್ಳಿ, ಸೆಂಟ್ ಥಾಮಸ್ ಟೌನ್ ಅಂಚೆ, ಬೆಂಗಳೂರು ನಗರ, 560084 ಎಂಬುವರು ಠಾಣೆಗೆ ಹಾಜರಾಗಿ ನೀಡಿದ ದೂರು ಏನೆಂದರೇ, ಪಿರ್ಯಾದುದಾರರು ಮೇಲಿನ ವಿಳಾಸದ ಪ್ಲಾಟ್‌ಅನ್ನು ಬಾಡಿಗೆ ಪಡೆದು ವಾಸ ಮಾಡಿಕೊಂಡು, ಬೆಂಗಳೂರು ನಗರದ ಬಾಣಸವಾಡಿಯ ಸಿ.ಎಂ.ಆರ್ ಕಾಲೇಜಿನಲ್ಲಿ ಬಿಬಿಎ ವಿದ್ಯಾಭಾಸ ಮಾಡುತ್ತಿರುತ್ತಾರೆ. ಉಮರ್ ಆರೀಫ್ ಬಿನ ಮೊಹ್ಮದ್ ಅರೀಫ್ ಗಫರ್ ಮತ್ತು ಫಹಿಮ್ ಅಹಮದ್ ಎಂಬುವರು ಪಿರ್ಯಾದದುದಾರರಿಗೆ ಸಂಬಂಧಿಗಳಾಗಿರುತ್ತಾರೆ. 2021 ನೇ ಸಾಲಿನಲ್ಲಿ ಪಿರ್ಯಾದುದಾರರು ಬಾಂಗ್ಲಾ ದೇಶದಲ್ಲಿದ್ದಾಗ ಉಮರ್ ಈತನು ಪಿರ್ಯಾದುದಾರರು ಭಾರತ ದೇಶಕ್ಕೆ ಪದವಿ ವ್ಯಾಸಂಗಕ್ಕಾಗಿ ಹೋಗುತ್ತಿರುವುದು ತಿಳಿದು, ಪಿರ್ಯಾದಿಯ ಆರ್ಥಿಕ ಸ್ಥಿತಿಯನ್ನು ತಿಳಿದುಕೊಂಡು, ಭಾರತದಲ್ಲಿ ವಿದ್ಯಾಭ್ಯಾಸದ ಜೊತೆಯಲ್ಲಿ ಕೆಲಸ ಮಾಡು ಎಂದು ಹೇಳಿ, ತಾನು ಜಗತ್ತಿನ ಬೇರೆ ಬೇರೆ ದೇಶಗಳಾದ ದುಬೈ, ಯುಎಸ್ಎ, ಯುಕೆ, ಕೆನಡಾದಲ್ಲಿರುವ ಕ್ಲೈಂಟ್‌ಗಳ ಬ್ಯಾಂಕ್ ಅಕೌಂಟ್‌ಗಳಿಗೆ ಕಾನೂನು ಬಾಹಿರ ಹಣದ ವಹಿವಾಟನ್ನು ಮಾಡುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಭಾರತ ದೇಶದಿಂದ ಹಣದ ವಹಿವಾಟಿನ ದಾಖಲೆಗಳ ಪುಸ್ತಕ ಇಟ್ಟುಕೊಳ್ಳುವ ಸಲುವಾಗಿ ಸಹಾಯ ಮಾಡುವಂತೆ ಮತ್ತು ಇದಕ್ಕೆ ಪಿರ್ಯಾದುದರರ ವಿದ್ಯಾಭಾಸದ ಖರ್ಚಿಗಾಗಿ ರೂ 8000/- ಸಂಬಳ ಕೊಡುವುದಾಗಿ ತಿಳಿಸಿರುತ್ತಾನೆ. ನಂತರ ಪಿರ್ಯಾದುದಾರರು 2022 ನೇ ಸಾಲಿನಲ್ಲಿ ಭಾರತಕ್ಕೆ ಬಂದು ವ್ಯಾಸಂಗ ಮಾಡುವ |

| | | | | | |
|---|---|---|---|---|---|
| | | | | | ಜೊತೆಯಲ್ಲಿ ಉಮರ್ ಆರೀಫ್ ನು ಹೇಳಿದಂತೆ ಆತನು ನೀಡಿದ ಲ್ಯಾಪ್ ಟಾಪ್ ನಲ್ಲಿ ಆತನು ಮಾಡುವ ಹಣದ ವಹಿವಾಟಿನ ಮಾಹಿತಿಯನ್ನು ಸಂಗ್ರಹಿಸುತ್ತಿರುತ್ತಾರೆ. ಉಮರ್ ಆರೀಫ್ ಮತ್ತು ಫಹಿಮ್ ಅಹಮದ್ ರವರು ಹಾಲಿ ಬಾಂಗ್ಲಾದೇಶದಲ್ಲಿರುತ್ತಾರೆ. ಇವರುಗಳು ಆಗಾಗ ಭಾರತಕ್ಕೆ ಭೇಟಿ ನೀಡುತ್ತಾರೆ. ಭಾರತಕ್ಕೆ ಬಂದಾಗ ಪಿರ್ಯಾದುದಾರರನ್ನು ಭೇಟಿಯಾಗುತ್ತಿರುತ್ತಾರೆ. ಅವರುಗಳಿಗೆ ಸೂಡಾನ್ ದೇಶದ ಪ್ರಜೆಯಾದ ಅಬೂಬಕರ್ ಎಂಬುವ ಸ್ನೇಹಿತನಿದ್ದು, ಈತನು ಉಮರ್ ಆರೀಫ್ ಮತ್ತು ಫಾಹಿಮ್ ಅಹಮದ್ ರವರಿಗೆ ಕಾನೂನು ಬಾಹಿರ ಹಣದ ವಹಿವಾಟಿನಲ್ಲಿ ಭಾಗಿಯಾಗಿರುತ್ತಾನೆ. ಬಾಂಗ್ಲಾದೇಶ ಸೇರಿದಂತೆ ಭಾರತದ ಹೊರಗಿನ ಏಜೆಂಟ್ಸ್‌ಳೊಂದಿಗೆ ಅನುಮಾನಾಸ್ಪದ ಹಣಕಾಸು ವಹಿವಾಟಿನಲ್ಲಿ ಹಣವನ್ನು ಪಡೆಯಲು ಏಜೆಂಟ್ ಗಳನ್ನು ಖಚಿತಪಡಿಸಲು ಉಮರ್ ಆರೀಫ್ ಮತ್ತು ಫಾಹಿಮ್ ಅಹಮದ್ ರವರುಗಳು ಕೆಲಸ ಮಾಡುತ್ತಿರುತ್ತಾರೆ. ಈ ಹಣಕಾಸಿನ ವಹಿವಾಟಿನ ವಿವರಗಳನ್ನು ಎಕ್ಸ್‌ಎಲ್ ಶೀಟ್ ನಲ್ಲಿ ಪಡೆದು ಹಣವನ್ನು ಪಡೆಯುವವರಿಗೆ ವಾಟ್ಸಾಪ್ ನಲ್ಲಿ ಕಳುಹಿಸಲಾಗುತ್ತದೆ. ಉಮರ್ ಆರೀಫ್ ಮತ್ತು ಫಾಹಿಮ್ ಅಹಮದ್ ರವರುಗಳು ಬೆಂಗಳೂರು ನಗರದಲ್ಲಿ ದ್ವಿಚಕ್ರ ವಾಹನಗಳನ್ನು ಬಾಡಿಗೆಗೆ ಕೊಡುತ್ತಿರುತ್ತಾರೆ. ಉಮರ್ ಆರೀಫ್ ಈತನು ಫಿರ್ಯಾದುದಾರರ ಮನೆಯಲ್ಲಿ ಇಟ್ಟುಕೊಂಡಿದ್ದ 24 ದ್ವಿಚಕ್ರ ವಾಹನಗಳ ಆರ್.ಸಿ ಕಾರ್ಡ್‌ಗಳನ್ನು ಕಮರ್ಷಿಯಲ್ ಉಪಯೋಗಕ್ಕಾಗಿ ಪಿರ್ಯಾದುದಾರರ ಮನೆಯಲ್ಲಿ ಇಟ್ಟಿರುವುದನ್ನು ಪಿರ್ಯಾದಿಯು ನೋಡಿರುತ್ತಾರೆ. ಉಮರ್ ಆರೀಫ್ ನ 4-5 ಕ್ರೆಡಿಟ್/ಡೆಬಿಟ್ ಕಾರ್ಡ್ಸ್‌ಗಳನ್ನು ನೋಡಿರುತ್ತಾರೆ. ಉಮರ್ ಆರೀಫ್, ಫಹೀಮ್ ಅಹಮದ್, ಅಬು ಬಕರ್ ಮತ್ತು ಅಹ್ಮದ್ ಫಾತಿಹ್ ಮತ್ತು ಸಹಚರರು ಕಾನೂನು ಬಾಹಿರ ಹಣಕಾಸಿನ ವರ್ಗಾವಣೆ ವಹಿವಾಟಿನಲ್ಲಿ ತೊಡಗಿಸಿಕೊಂಡಿರುತ್ತಾರೆಂದು ಸೂಕ್ತ ಕಾನೂನು ಕ್ರಮಕ್ಕಾಗಿ ಕೊಟ್ಟ ದೂರು. |

Bengaluru District

| ಕ್ರ.ಸಂ | ನಗರ/ ಜಿಲ್ಲೆ | ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಅಕ್ರಮ ನಿವಾಸಿಗಳು | ಮೊ.ಸಂ ಮತ್ತು ಕಲಂ | ಪ್ರಕರಣದ ವಿಧ (ಫಾರಿನರ್ಸ್/ಪಾಸ್ ಪೋರ್ಟ್, ಡ್ರಗ್ಸ್, ಕೊಲೆ, ಸುಲುಗೆ, ಅತ್ಯಾಚಾರ, ಧರ್ಮ ಪ್ರಚಾರ, ಇತರೆ) | ಪ್ರಕರಣದ ಸಂಪೂರ್ಣ ವಿವರ |
|---|---|---|---|---|---|
| 1. | | 1) ಸಿಲಾದಾಸ್ W/O ವಿಷ್ಣುಪ್ ದಾಸ್ ಪ್ರಾಯ 23 ವರ್ಷ ಮನೆ ಬಾಷು ನಗರ, ಅಗರ್ತಲಾ ಬಾಂಗ್ಲಾದೇಶ<br>2) ಮೋನಿ ಮಿಯಾ W/O ಸುಜೋನ್ ಪ್ರಾಯ 22 ವರ್ಷ ಮನೆ ಸ್ಥಳ ಈದ್ಗಾ, ಗ್ರಾಮ ಜೋಕೋಡಿಯಾ ಠಾಣಾ ಬಾರ್ಡರ್, ಕಾಕ್ಸ್ ಬಜಾರ್ ಪೋಸ್ಟ್ ಮತ್ತು ಜಿಲ್ಲೆ ಬಾಂಗ್ಲಾದೇಶ<br>3) ಮುಹಮ್ಮದ್ ಅಕಿ w/o ಅಬ್ದುಲ್ ರೋಹಿನ್ 34 ವರ್ಷ ತವರು ಮನೆ ನರೇನ್ ಗಂಜ್ ಫೊತುಲ್ಲಾ, ಥಾನಾ ಮತ್ತು ಜಿಲ್ಲೆ ಢಾಕಾ ಬಾಂಗ್ಲಾದೇಶ<br>4) ಮುಹಮ್ಮದ್ ನೋಪುರ್ W/O ಹಸ್ನಾನ್ಅವಾಲ್ ದಾರ್ 25 ವರ್ಷಗಳ ಮನೆ ಸ್ಥಳ ಮಿರ್‌ಪುರ್ ಎಗರೋ ಲಾಲ್‌ಮಾಟಿಯಾ ಟೆಂಪೋ ಸ್ಟ್ಯಾಂಡ್ ಢಾಕಾ ಬಾಂಗ್ಲಾದೇಶ<br>5) ಹ್ಯಾಪ್ಪಿ S/0 ವಿಷ್ಣುಪ್ ದಾಸ್ ವಯಸ್ಸು 4 ವರ್ಷಗಳು ಮನೆ ಸ್ಥಳ ಬಾಶು ನಗರ ಅಗರ್ತಲ ಬಾಂಗ್ಲಾದೇಶ | ಅತ್ತಿಬೆಲೆ ಪೊಲೀಸ್ ಠಾಣೆ ಮೊ.ನಂ: 306/2023 ಕಲಂ 370 ಐಪಿಸಿ ಇಮ್ಮೊರಲ್ ಟ್ರಾಫಿಕ್ ಪ್ರಿವೆಂನ್ಷನ್ ಆಕ್ಟ್ 1956 ಕಲಂ. 3,4,5,6,7 | ಇತರೆ | ದಿ:03/08/2023 ರಂದು ಸಂಜೆ 06-30 ಗಂಟೆಗೆ ಠಾಣೆಯಲ್ಲಿ ಇರುವಾಗ ಅತ್ತಿಬೆಲೆ ಪೊಲೀಸ್ ಠಾಣೆಯ ಸರಹದ್ದು ಅಬ್ಬಯ್ಯನ ಪಾಳ್ಯ ಗ್ರಾಮದಲ್ಲಿರುವ ವೆಂಕಟೇಶ್ ಬಿಲ್ಡಿಂಗ್ ನಲ್ಲಿ ಬಾಂಗ್ಲಾಧೇಶದ ಮಹಿಳೆಯರನ್ನು ಅಕ್ರಮ ಬಂದನದಲ್ಲಿ ಇರಿಸಿಕೊಂಡು ಗಿರಾಕಿಗಳನ್ನು ಕರೆಸಿಕೊಂಡು ಲೈಂಗಿಕ ಶೋಷಣೆ ಮಾಡಿ ವೇಶ್ಯವಾಟಿಕೆ ನಡೆಸಿ ಅಕ್ರಮ ಹಣ ಸಂಪಾದನೆ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು ಸಿಬ್ಬಂದಿಯೊAದಿಗೆ ದಾಳಿ ಮಾಡಿ ಪ್ರಕರಣ ದಾಖಲು ಮಾಡಲಾಗಿರುತ್ತದೆ. ಅವರುಗಳ ದೇಶಕ್ಕೆ ಗಡಿಪಾರು ಮಾಡಲಾಗಿರುತ್ತದೆ. |
| 2. | | 1. ಮಹಮ್ಮದ್ ರಫೀಕ್ @ ರಣಗಾಜಿ ದಿವಂಗತ ನಜೀರ್ | ಬನ್ನೇರುಘಟ್ಟ ಪೊಲೀಸ್ ಠಾಣಾ | ಇತರೆ | ರೀಪಾ ಅಕ್ತರ್ @ ರೂಪಾ ಅಕ್ತರ್ ರವರು ತಲಾಷ್ ಅಸೋಯಿಯೇಷನ್, |

| | | | | | |
|---|---|---|---|---|---|
| | | ಅಹಮದ್ s/o ಬಾಶಿಕಪಲ್ಲಿ ಗ್ರಾಮ, ಬಲಿಗ್ರಾಮ್ ಪೋಸ್ಟ್, ಚಿತ್ರಗಂಗ್ ಜಿಲ್ಲೆ, ಬಾಂಗ್ಲಾದೇಶ<br>2. ಸೈಫುಲ್ ಅಕ್ತರ್ ರೂಪಾ s/o ಮೊಹಮ್ಮದ್ ರಫೀಕ್ ಅಜಿಂಪುರ್, ಬಿರ್ಫುಮ್ ಪೊಲೀಸ್ ಠಾಣೆ, ಕುಷ್ಟಿಯಾ ಜಿಲ್ಲೆ, ಖುಲ್ನಾ. ಬಾಂಗ್ಲಾದೇಶ<br>3. ಮಹಮ್ಮದ್ ಮುಫಿಜ್ ಶೇಖ್ s/o ಅಬ್ದುಲ್ ಸುಕ್ಕುಮ್ಮತ್ತಾಮಿಯಾ ಗ್ರಾಮ, ಚೋಟ್ಕೋಗ್ರಾಮ್ ಜಿಲ್ಲೆ, ಬಾಂಗ್ಲಾದೇಶ. | ಮೊ.ನಂ: 365/2023 ಕಲಂ ಫಾರಿನರ್ಸ್ ಆಕ್ಟ್ 1946 ಕಲಂ 14, ಜೊತೆಗೆ 370(2),420,468 ಐಪಿಸಿ | | ರವರು ಹಾಜರುಪಡಿಸಿದ ಆಕೆಯ ಹೇಳಿಕೆ ಪಡೆಯಲಾಗಿ ತಾನು ಬಾಂಗ್ಲಾ ವಾಸಿಯಾಗಿದ್ದು ನಾನು ಸೌದಿಕೆ ಕೆಲಸಕ್ಕೆ ಹೋಗಲು ಸಹಜಾನ್ ಎಂಬುವ ಎಜೆಂಟ್ ಸಂಪರ್ಕಿಸುವಂತೆ ತಿಳಿಸಿ ನಾನು ಆತನನ್ನು ಸಂಪರ್ಕಿಸಿದಾಗ ಆತ ನನಗೆ ಫೋನ್ ನಂಬರ ನೀಡಿ ಬಾಂಗ್ಲಾ ಬಾರ್ಡರ್ ಗೆ ಬರುವಂತೆ ತಿಳಿಸಿ ನಾನು ಪೆತ್ರಾಪುರ್ ಗೆಬಂದು ಫೋನ್ ಮಾಡಿದಾಗ ನನಗೆ ವೆಸ್ಟ್ ಬೆಂಗಾಲ್ ಆಧಾರ್ ಕಾರ್ಡ್ ಕೊಟ್ಟು ನಾನು ಬೆಂಗಳೂರಿನ ಬನ್ನೇರುಘಟ್ಟಕ್ಕೆ ಬಂದಿದ್ದು ಅವರು ನನಗೆ ಕೆಲಸ ಕೊಡಿಸುವುದಾಗಿ ಹೇಳಿ ಕೊಡಿಸದೇ ನೀನು 2 ಲಕ್ಷ ಕೊಟ್ಟರೆ ವಾಪಸ್ ಬಾಂಗ್ಲಾಗೆ ಕಳುಹಿಸುವುದಾಗಿ ಬೆದರಿಕೆ ಹಾಕಿರುತ್ತಾರೆ.<br>ಸದರಿ ಪ್ರಕರಣವು 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆನೇಕಲ್ ನ ಎಸ್‌ಸಿ ನಂ 5004/2025 ರಲ್ಲಿ ವಿಚಾರಣೆಯಲ್ಲಿರುತ್ತದೆ ಆರೋಪಿ-1 ಮತ್ತು 3 ಆರೋಪಿಗಳು ಸೂಂಡಕೊಪ್ಪದ ಡಿಟೆನ್ಷನ್ ಸೆಂಟರ್ ನಲ್ಲಿ ಇದ್ದು, ಎ-2 ಆರೋಪಿ ಮಾನ್ಯ ನ್ಯಾಯಾಲಯದ ಜಾಮೀನು ಮೇಲೆ ಬಿಡುಗಡೆಯಾಗಿರುತ್ತಾರೆ. |
| 3. | | ಸೈಂದುಲ್ ಮಂಡಲ s/o ಲೇಟ್ ಅಬ್ದುಲ್ ಇಬ್ರಾಬುರ್, 44 ವರ್ಷ, | ಸೂರ್ಯನಗರ ಪೊಲೀಸ್ ಠಾಣಾ ಮೊ.ನಂ:500/2024 ಕಲಂ: 34,35,36 ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಕಾಯ್ದೆ 2016 ಜೊತೆಗೆ 336(2),336(3), 340(2) ಬಿ.ಎನ್.ಎಸ್ | | ಸೂರ್ಯನಗರ ಪೊಲೀಸ್‌ಠಾಣಾ ಸರಹದ್ದಿನ ಹೀಲಲಿಗೆ ಗ್ರಾಮದಲ್ಲಿ ಅನ್ರಾಬ್ ಮಂಡಲ್ ಎಂಬುವರು ಬಾಂಗ್ಲಾ ದೇಶದ ವ್ಯಕ್ತಿಗಳಿಗೆ ನಕಲಿ ಆಧಾರ್ ಕಾರ್ಡ್ ಮಾಡಿಕೊಡುತ್ತಿರುವುದಾಗಿ |

| | | | | | |
|---|---|---|---|---|---|
| 4. | | ಮೋಹಿನ್ ಹುಸ್ಸೈನ್ಮೊಲ್ಲಾ, ಬಾಂಗ್ಲಾದೇಶ | ಸರ್ಜಾಪುರ- ಪೊಲೀಸ್ ಠಾಣೆ ಮೊ.ನಂ: 129/2024 ಕಲಂ: 14 ಎ.ಬಿ ಫಾರಿನರ್ಸ್ ಆಕ್ಟ್ ಮತ್ತು 25 ಆರ್ಮ್ಸ್ ಆಕ್ಟ್, | ಫಾರಿನರ್ಸ್ ಆಕ್ಟ್ ಮತ್ತು ಆರ್ಮ್ಸ್ ಆಕ್ಟ್ | ದಿನಾಂಕ:21.03.2026 ರಂದು ಠಾಣಾ ಸರಹದ್ದಿನ ಕಾಡ ಅಗ್ರಹಾರ ಗ್ರಾಮದ ಚೇತನ್ ರೆಡ್ಡಿ ರವರ ಮನೆಯಲ್ಲಿ ಬಾಂಗ್ಲಾದೇಶದಿAದ ಬಂದಿರುವ ವ್ಯಕ್ತಿವಾಸವಾಗಿದ್ದಾನೆಂದು ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಪರಿಶೀಲನೆ ಮಾಡಲಾಗಿ ದಾಖಲಾತಿಗಳನ್ನು ಪಶ್ಚಿಮ ಬಂಗಾಳ ಎಂದು ತಿಳಿಸಿದ್ದು ಸರಿಯಾಗಿ ಪರಿಶೀಲನೆ ಮಾಡಿ ವಿಚಾರ ಮಾಡಿದಾಗ ಬಾಂಗ್ಲದೇಶ ಎಂದು ಒಪ್ಪಿಕೊಂಡಿದ್ದು ಈತನ ಮೇಲೆ ಕಾನೂನು ಕ್ರಮ ಕೈಗೊಳ್ಳಲು ನೀಡಿದವರದಿಯ ಮೇರೆಗೆ ಸರ್ಜಾಪುರ ಪೊಲೀಸ್ ಠಾಣಾ ಮೊ ಸಂ:129/2024 ಪ್ರಕರಣ ದಾಖಲಾಗಿರುತ್ತೆ.<br>3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆನೇಕಲ್ ನ ಎಸ್‌ಸಿ ನಂ 5047/2024 ರಲ್ಲಿ ವಿಚಾರಣೆ ನಡೆದು ಬಾಂಗ್ಲಾದೇಶದ ಪ್ರಜೆ ಮೊಹೀನ್ ಹುಸೇನ್ ಮೌಲಗೆ ಮಾನ್ಯ ನ್ಯಾಯಾಲಯವು ಒಂದು ವರ್ಷ ಶಿಕ್ಷೆ ವಿಧಿಸಿದ್ದು ಶಿಕ್ಷೆ ಮುಗಿದ ನಂತರ ಅವನ ದೇಶಕ್ಕೆ ಗಡಿಪಾರು ಮಾಡಬೇಕೆಂದು ಆದೇಶ ಮಾಡಿರುತ್ತದೆ.<br>ಈತನ ಜೈಲು ಶಿಕ್ಷೆ ಮುಗಿದಿದ್ದು ಎಫ್ ಆರ್‌ಆರ್‌ಒ ಆದೇಶದಂತೆ ದಿನಾಂಕ 13.04.2026 ರಂದು ವಿಮಾನದ ಮೂಲಕ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಗಿರುತ್ತದೆ. |
| 5. | | 1.ರಶೀದ್ ಅಲಿ ಸಿದ್ದಿಕ್ @ ಶಂಕರ್ ಶರ್ಮಾ s/o ಅಜಯ್ ಶರ್ಮಾ @ ಶರಫತ್ ಅಲಿ ಸಿದ್ದಿಕ್<br>2.ಆಸಿಯಾ ಹನೀಫ್ @ ಆಶಾ ಶರ್ಮಾ w/o ರಶೀದ್ ಅಲಿ ಸಿದ್ದಿಕ್ @ ಶಂಕರ್ ಶರ್ಮಾ, | ಜಿಗಣಿ ಪೊಲೀಸ್ ಠಾಣಾ ಮೊ.ನಂ: 196/2024 ಕಲಂ: 420.468. 471 ಐಪಿಸಿ & 12(1)(ಬಿ).12. 1A,(ಎ)(ಬಿ), 12(2) ಪಾಸ್ ಪೋರ್ಟ್ ಕಾಯ್ದೆ-1967 | ಪಾಸ್ ಪೋರ್ಟ್ ಕಾಯ್ದೆ | ಸದರಿ ಪ್ರಕರಣದಲ್ಲಿ ಎಲ್ಲಾ 11 ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಭಾರತಕ್ಕೆ ಬಂದಿದ್ದು, ಸದರಿರವರ ಪ್ರಕರಣವು ಜಿಲ್ಲಾ ಸತ್ರ ನ್ಯಾಯಾಲಯ ಆನೇಕಲ್ ನ ಎಸ್‌ಸಿ ನಂ 5027/2025 ರಲ್ಲಿ ವಿಚಾರಣೆಯಲ್ಲಿರುತ್ತದೆ. |

| | | | | | |
|---|---|---|---|---|---|
| | | 3.ರುಬಿನಾ @ ರಾಣಿ ಶರ್ಮಾ w/o ಮೊಹಮ್ಮದ್ ಹನೀಫ್<br>4.ತಾರಿಕ್ ಸೈಯದ್ @ ಸನ್ನಿ ಚೋಹಾನ್ s/o ಮೊಹಮ್ಮದ್ ಸೈಯದ್ ಅಕ್ತರ್<br>5.ಶ್ರೀಮತಿ. ಅನಿಲ ತಾರಿಕ್ @ ಶ್ರೀಮತಿ. ದೀಪಾಲಿ ಚೌಹಾಣ್,<br>6.ಮೊಹಮ್ಮದ್ ಯಾಸಿನ್ @ ಕಾರ್ತಿಕ್ ಶರ್ಮಾ s/o ಉನ್ನಿಸ್ ಮೊಹಮ್ಮದ್<br>7.ಶ್ರೀಮತಿ ಫಾತಿಮಾ ಗೋಹರ್ @ ನಿಶಾ ಶರ್ಮಾ w/o ಅಲ್ತಾಫ್ ಅಹಮದ್.<br>8.ಶ್ರೀಮತಿ. ಜೈನಬ್ ನೂರ್ @ ನೇಹಾ ಶರ್ಮಾ w/o ಮೊಹಮ್ಮದ್ ಯಾಸಿನ್,<br>9.ಕುಮಾರಿ ಇಶ್ರತ್ ಗೋಹರ್ @ ಪ್ರೀತಿ ಚೌಹಾಣ್<br>10. ಮೊಹಮ್ಮದ್ ಹನೀಫ್ @ರಾಂಬಾಬು ಶರ್ಮಾ s/o ಗುಲಾಂನಬಿ (ಮರಣ 30-01-2025 | | | |
| 6. | | 1.ಸಲೀಮ್ ಖಾನ್ @ ಸಾಹಿಲ್ ಪಟೇಲ್ S/O ಅಸ್ಲಂ ಖಾನ್ @ ಸೋಹನ್ ಪಟೇಲ್<br>2.ಮೊಹಮ್ಮದ್ ಫರಾಜುದ್ದೀನ್ @ ಪ್ರಕಾಶ್ ಪಟೇಲ್ S/O ಲೇಟ್ ನಫೀಸುದ್ದೀನ್ಮುರೇಶಿ @ ಸೋಹನ್ ಪಟೇಲ್<br>3.ರುಕ್ಸಾನಾ @ ಆರತಿ ಪಟೇಲ್ W/O ಮೊಹಮ್ಮದ್ ಫರಾಜುದ್ದೀನ್ @ ಪ್ರಕಾಶ್ ಪಟೇಲ್ | ಜಿಗಣಿ ಪೊಲೀಸ್ ಠಾಣಾ ಮೊ.ನಂ: 210/2024 ಕಲಂ 420.467.468. 471 ಐಪಿಸಿ & 12(1)(ಬಿ).12. 1A,(ಎ)(ಬಿ), 12(2) ಪಾಸ್ ಪೋರ್ಟ್ ಕಾಯ್ದೆ-1967 ಜೊತೆಗೆ 14 (ಎ)(ಬಿ) ಫಾರಿನರ್ಸ್ ಆಕ್ಟ್ | ಪಾಸ್ ಪೋರ್ಟ್ ಕಾಯ್ದೆ-& ಫಾರಿನರ್ಸ್ ಆಕ್ಟ್ | ಸದರಿ ಪ್ರಕರಣದಲ್ಲಿ ಎಲ್ಲಾ 10 ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಭಾರತಕ್ಕೆ ಅಕ್ರಮವಾಗಿ ಬಂದಿದ್ದು, ಸದರಿ ರವರ ಪ್ರಕರಣವು ಜಿಲ್ಲಾ ಸತ್ರ ನ್ಯಾಯಾಲಯ ಆನೇಕಲ್ ನ ಎಸ್‌ಸಿ ನಂ 5028/2025 ರಲ್ಲಿ ವಿಚಾರಣೆಯಲ್ಲಿರುತ್ತದೆ. |

| | | | | | |
|---|---|---|---|---|---|
| | | 4.ನೌಶೀನ್ @ ಪೂಜಾ ಪಟೇಲ್ W/O ಸಲೀಮ್ ಖಾನ್ @ ಸಾಹಿಲ್ ಪಟೇಲ್<br>5.ನುಸ್ರುಹತ್ @ ಪೂಜಾ ಅಧಿಕಾರಿ W/O ಲೇಟ್ ಆಸಿಹುಸಿಯನ್ @ ಪ್ರೇಮ್ ಅಧಿಕಾ<br>6.ಸೈಫುಲ್ಲಾ ಬಾಜ್ವಾ @ ಸೈಫ್ ಚೌಧರಿ S/o ಲೇಟ್ ಸನಾವುಲ್ಲಾ @ ಸನಾ ಚೌಧರಿ.<br>7.ಹಮೀದಾ W/O ಸೈಫುಲ್ಲಾ ಬಾಜ್ವಾ 48 ವರ್ಷ.<br>8. ಗೋಹರ್ ಸಫಿಕ್ ರೆಹಮಾನ್ S/O ಲೇಟ್ ಖಲೀಲ್ ಉರ್ರೆಹಮಾನ್ @ ಖಲೀಲ್ ಗೋಹರ್.<br>9.ಫರ್ಜಾನಾ ವಂದನೆಗಳು ಶಫೀಕ್ ಉರ್ರೆಹಮಾನ್.<br>10.ಕುಮಾರಿ ಮಹನೂರ್ D/O ಲೇಟ್ ಜಮಾನಕಮಾರ್ | | | |
| 7. | | 1.ನಾನಾ ಜೊನ್ನಾವೊನ್ ಕೆ @ ಜ್ಹೋನ್ @ಚಿಬಿಕ್ಹೋರ್ @ಒಲು @ಚುಕ್ವನ್ ನಾನಾ @ಕಿಂಗ್ಸಿ ಎಸ್/ಒ ಇಬ್ರಾಹಿಂ ಒಫೂರಾಡಿಲೆ/ ಕ್ರಿಷ್ಟಿಯನ್, ಯುನಿಜಿಕ್ ಡಬ್ಲ್ಯೂ ಸೌತ್, ಅವ್ಕಾ, ಅನಂಬ್ರಾ ಸೌತ್ ಸ್ಟೇಟ್, ನೈಜೀರಿಯಾ | ಜಿಗಣಿ ಪೊಲೀಸ್ ಠಾಣೆ ಮೊ.ನಂ:75/2026 ಕಲಂ: 14 ಫಾರಿನರ್ಸ್ ಆಕ್ಟ್ | ಫಾರಿನರ್ಸ್ ಆಕ್ಟ್ | ಸದರಿ ಪ್ರಕರಣದಲ್ಲಿ ಆರೋಪಿಯ ವೀಸಾ ಅವಧಿ ಮುಕ್ತಾಯವಾಗಿದ್ದು, ಪ್ರಕರಣವು 3ನೇ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಆನೇಕಲ್ ನ ಸಿಸಿ ನಂ 6346/2026ರಲ್ಲಿ ವಿಚಾರಣೆಯಲ್ಲಿರುತ್ತದೆ. |

Mangaluru City

| ಕ್ರ.ಸಂ | ನಗರ/ಜಿಲ್ಲೆ | ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಅಕ್ರಮ ನಿವಾಸಿಗಳ ಸಂಖ್ಯೆ | ಮೊ.ಸಂ ಮತ್ತು ಕಲಂ | ಪ್ರಕರಣದ ವಿಧ (ಫಾರಿನರ್ಸ್/ಪಾಸ್‌ಪೋರ್ಟ್ ಡಗ್ಸ್ ಕೊಲೆ , ಸುಲುಗೆ ಅತ್ಯಾಚಾರ, ಧರ್ಮಪ್ರಚಾರ ಇತರೆ) | ಪ್ರಕರಣದ ಸಂಪೂರ್ಣ ವಿವರ |
|---|---|---|---|---|---|
| 01 | ಮಂಗಳೂರು ನಗರ | 01 | ಬಜಪೆ ಪೊಲೀಸ್ ಠಾಣಾ ಮೊ.ನಂ 199/2024 ಕಲಂ 319, 336, 340, ಬಿಎನ್‌ಎಸ್ ಜತೆಗೆ 12,1A,14(B) Foreigners Act | ಫಾರಿನರ್ಸ್ (ಪಾಸ್‌ಪೋರ್ಟ್ ಪ್ರಕರಣ | ಅಕ್ರಮ ಬಾಂಗ್ಲಾ ಪ್ರಜೆಯಾದ ಮೊಹಮ್ಮದ್ ಮಾಣಿಕ್ ಎಂಬಾತನು ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದುಬೈಗೆ ಪ್ರಯಾಣಿಸಲೆಂದು ಭಾರತೀಯ ಪಾಸ್‌ಪೋರ್ಟ್ ನಂಬ್ರ ಡಬ್ಲ್ಯು 1741924 ದಾಖಲಾತಿಗಳನ್ನು ಇಮಿಗೇಶನ್ ವಿಭಾಗ ಕೌಂಟರ್‌ನಲ್ಲಿ ಹಾಜರುಪಡಿಸಿದಾಗ ಪರಿಶೀಲನೆ ವೇಳೆಯಲ್ಲಿ ಅನುಮಾನಗೊಂಡು ವಿಚಾರಣೆ ಮಾಡಿದಾಗ ದಾಖಲಾತಿಗಳಿಂದ ಈತನು ಬಾಂಗ್ಲದೇಶದ ಪ್ರಜೆಯಾಗಿರುವುದು ಕಂಡುಬಂದಿರುವುದರಿಂದ ಈತನ ವಿರುದ್ಧ ಪ್ರಕರಣ ದಾಖಲಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನದಲ್ಲಿದ್ದ ಈತನು ಕರ್ನಾಟಕ ರಾಜ್ಯ ಮಾನ್ಯ ಉಚ್ಚ ನ್ಯಾಯಾಲಯದ ಕ್ರಿಮಿನಲ್ ಪಿಟಿಷನ್ 7711/2025ರಂತೆ ದಿನಾಂಕ: 02/02/2026ರಂದು ಜಾಮೀನು ಮಂಜೂರು ಮಾಡಿರುತ್ತದೆ. ಪ್ರಕರಣವು ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ |

Bengaluru South Ramanagara

| ಕ್ರ.ಸಂ | ಪೊಲೀಸ್ ಠಾಣೆ | ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಅಕ್ರಮ ನಿವಾಸಿಗಳು | ಮೊ.ಸಂ ಮತ್ತು ಕಲಂ | ಪ್ರಕರಣದ ವಿಧ (ಫಾರಿನರ್ಸ್/ಪಾಸ್ ಪೋರ್ಟ್, ಡ್ರಗ್ಸ್, ಕೊಲೆ, ಸುಲುಗೆ, ಅತ್ಯಾಚಾರ, ಧರ್ಮ ಪ್ರಚಾರ, ಇತರೆ) | ಪ್ರಕರಣದ ಸಂಪೂರ್ಣ ವಿವರ |
|---|---|---|---|---|---|
| 01 | ಐಜೂರು ಪೊಲೀಸ್ ಠಾಣೆ | 01 | ಮೊ.ಸಂ. 05/2026, ಕಲಂ.8(C),22(B), NDPS Act | ಡ್ರಗ್ಸ್ ಮಾರಾಟ | ಸದರಿ ಪ್ರಕರಣದ ಎ2 ಆರೋಪಿಯಾದ Mr. Johnson K. Nana ಉಗಾಂಡ ದೇಶದ ಪ್ರಜೆಯು ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರ ಮೇರೆಗೆ, ಆರೋಪಿಯನ್ನು ಬಂಧಿಸಿ, ಮಾನ್ಯ ನ್ಯಾಯಾಲಯದಮುಂದೆ ಹಾಜರು ಪಡಿಸಲಾಗಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಪ್ರಸ್ತುತ ಆರೋಪಿಯು ನ್ಯಾಯಾಂಗಬಂಧನದಲ್ಲಿದ್ದು, ಪ್ರಕರಣವು ನ್ಯಾಯಾಲಯದ ವಿಚಾರಣಾ ಹಂತದಲ್ಲಿರುತ್ತದೆ. |